# ಕಾನೀನ (ನಾಟಕ)

## ದೃಶ್ಯ - ೧

*(ಗಂಗಾತೀರದ ಬನ. ಕನ್ಯೆಯಾದ ಕುಂತಿದೇವಿ ಹೂವು ಮೊದಲಾದವುಗಳನ್ನು ಆಯ್ದು ಕೊಂಡು ಬರುವಳು.)*

**ಕುಂತಿ** – ನನ್ನ ಕೆಳದಿಯರೆನ್ನ ಅಗಲೆಲ್ಲಿ ಅಡಗಿದರೊ
ನಾಕಾಣೆ. ಅರಸರಿಸಿ ಸಾಕಾಯ್ತು. ಕೇದಗೆಯ
ಮುಳ್ಳಿಡಿದ ಮಳೆಗಳಲಿ ಹುಡುಕುವನೆ, ಸರ್ಪಗಳ
ಹೆದರಿಕೆ! ಪಾದರಿಯ ಬನದಲ್ಲಿ ಹುಡುಕುವನೆ,
ದುರುದುಂಬಿಗಳ ಕಾಟ! ಚೆಂದಳಿರನುಟ್ಟಿರುವ
ಮಾಮರದ ತೋಪಿನಲಿ ಸೊಕ್ಕಿದಳಿಗಳ ಭಯ!
ಬನವೆನಿತು ಕಣ್ಗೆಡ್ಡವಾಗಿಹುದು? ಬಾಂದೊರೆಗೆ
ಕುಸುಮಾಂಜಲಿಯನೆತ್ತಿ ಭಕ್ತಿಯಲಿ ಬಾಗಿರುವ
ತಳಿರುಡೆಯ ಸಿರಿಯಿಂದ ನಳನಳಿಸಿ ಮೆರೆಯುತಿದೆ.
ಹಕ್ಕಿಗಳು ತೀತಾಂಜಲಿಯ ನಿವೇದಿಸುವಂತೆ
ಮೈಮರೆತು ಉಲಿಯುತಿವೆ. *(ಮೇಲೆ ನೋಡಿ)* ಆಹಾ! ದಿನೇಶನಾ
ಮುಗಿಲಿಲ್ಲದಾಗಸದಿ ಥಳಿಸುತಿಹನೆಂತು! *(ತಿರುಗಾಡಿ ಚಿಂತಿಸುತ್ತಾ)*
ದೂರ್ವಾಸ ಮುನಿವರನು ಕೊಟ್ಟೈದು ವರಗಳಲಿ
ಸೂರ್ಯಮಂತ್ರವು ಒಂದು. ಮುನಿವರನ ವರಗಳಲಿ
ದಿಟವಾಗಿಯೂ ಮಹಿಮೆಯಿರುವುದೇ? ನೋಡುವೆನು;
ಇದೆ ಸಮಯ. ಕೆಳದಿಯರು ಇಲ್ಲಿಲ್ಲ, ಯಾರಿಲ್ಲ,
ಏಕಾಂಗಿಯಾಗಿಹೆನು. ನಿವೇದಿಸುತೆ ಈ ಅಲರ
ಸೂರ್ಯದೇವನ ಪೂಜೆಮಾಡಿ ಅಭಿಮಂತ್ರಿಸುವೆ!
*(ಪೂಜೆಮಾಡಿ ಬೇಡುವಳು)*
ಎಲೆ ದಿವಾಕರನೆ, ಸೂರ್ಯನಾರಾಯಣನೆ,
ಜಗದ ಸಂರಕ್ಷಕನೆ, ಸರ್ವವಿಶ್ವದ ಕಣ್ಣೆ,
ದಿನಮಣಿಯೆ, ಬಾಲೆಯಭಿಲಾಷೆಯಂಕುರವು
ಫಲಿಸುವಂದದಿ ಮಾಡು, ಭಕ್ತಿಯಲಿ ಬೇಡುವೆನು. *(ಬೆಚ್ಚಿ)*
ಏನಿದೇನಿದು ಕಾಂತಿ ಮುತ್ತುತಿಹುದೀ ಬನವ!
ನೂರ್ಮಡಿಯ ಸೊಬಗಿಂದ ನಲಿಯುತಿದೆ ತರುನಿಕರ!
ಯಾರಿವನು ಥಳಿಸುತಿಹ ಕಾಂತಿಯಲಿ ಬಳಿಸಾರು–

ತಿಹನು. ಯಕ್ಷನೊ? ಕಿನ್ನರನೊ? ಅಮರನೊ?
ಕಂಗಳವನನು ನೋಡಲಾರದಲೆ ಮುಚ್ಚುತಿವೆ!
*(ಕೈಗಳಿಂದ ಮೊಗವನ್ನು ಮುಚ್ಚಿಕೊಂಡು ಮೊಳಕಾಲೂರಿ ನಿಲ್ಲುವಳು. ಸೂರ್ಯದೇವನು ಕೈಯಲ್ಲಿ ಶಿಶುವೊಂದನ್ನು ಹಿಡಿದು ಬಂದು ಕುಂತಿಯ ಮುಂದೆ ನಿಂತು)*

**ಸೂರ್ಯದೇವ** – ಬಾಲೆ, ಕುಂತಿಯೆ, ನಿನ್ನ ಬಯಕೆಯನು ಸಲ್ಲಿಸಲು
ನೋಡಿದೋ ಬಂದಿಹೆನು. ಬೆಚ್ಚದಿರು, ಬೆದರದಿರು.
ಲೊಕದ ಚರಾಚರಂಗಳ ಜೀವಕಾಧಾರ-
ವಾಗಿರುವ ಸೂರ್ಯದೇವ ನಾನು. ಇದೆಕೋ
ನಿನ್ನ ಬಾಳಿನ ಬಯಕೆಯಂಕುರವು ಪೂತಿಹುದು.
ನಿನಗಾಗಿ ಮುದ್ದು ಕುವರನ ನಾನು ತಂದಿಹೆನು;
ಕಣ್ದೆರೆದು ನೋಡು, ಮೇಲೇಳು, ತೆಗೆದುಕೋ!
ನಿನ್ನ ಸೌಭಾಗ್ಯಕೆಣೆಯಿಲ್ಲ : ಇವನಪ್ರತಿಮ
ಸಾಹಸಿ! ಇವನೆದೆಯೊಳಮೃತಕಲಶವಿದೆ!
ಮೈಯಲಿ ದುರ್ಭೇದ್ಯವಹ ವಜ್ರ ಕವಚವಿದೆ!
ಈ ಎರಡು ಇವನೊಳಿರುವನ್ನೆಗಂ ಇವನೊಡನೆ
ಮಾರ್ಮಲೆವ ಪಟುಭಟರು ಮೂರುಲೋಕದೊಳಿಲ್ಲ.
ಮೊದಲು ನೀನೀತನನು ಕಣ್ಣಿಂದ ನೋಡದಲೆ
ಕಿವಿಯಿಂದ ಕೇಳಿರುವೆ, ಅದರಿಂದ ನೀನಿವನ
ಕರ್ಣದಿಂ ಪಡೆದಿರುವೆ. ತಿರೆಯೊಳೀತನ ಹೆಸರು
ಕರ್ಣನೆಂದೊಳ್ಪಸದಿ ಪ್ರಖ್ಯಾತವಾಗಿರಲಿ.
*(ಕುಂತಿಯು ಮೆಲ್ಲನೆ ಮೇಲೆದ್ದು ಸೂರ್ಯದೇವನಿಗೆ ಕೈಮುಗಿದು, ನಾಚುತ್ತ ಕರ್ಣನನ್ನು ಪರಿಗ್ರಹಿಸುವಳು. ಸೂರ್ಯದೇವನು ಅದೃಶ್ಯನಾಗುವನು. ಕುಂತಿಯು ಮಗುವನ್ನು ಕೈಯಲ್ಲಿ ಹಿಡಿದು ನೋಡುತ್ತಾ ನಗುವಳು, ಮುದ್ದಾಡುವಳು, ನಾಚುವಳು, ಸುತ್ತಲೂ ನೋಡಿ ಬೆಚ್ಚುವಳು.)*

**ಕುಂತಿ** – ಬನದರಳುಗಳ ದೇಸಿ ಮೈಯಾಂತ ತೆರದಿಂದೆ
ರಾಜಿಸುವದೀ ಕುಮಾರನ ಪೆಂಪು. ನಳನಳಿಪ
ಕೆಂದಳಿರ ಕೋಮಲತೆ ರೂಪವೆತ್ತಂದದಲಿ
ಮೆರೆಯುತಿಹುದೀ ಕುಮಾರನ ಸೊಬಗು. ಬಾಂದೊರೆಯ
ವೀಚಿಗಳ ನಲ್ಮೆಯೋ ಎಂಬಂತೆ ನಲಿಯುತಿದೆ
ನನ್ನ ಕಂದನ ಮೊಗವು. ತಿಳಿಯಾಳದಾಗಸದ
ನೈರ್ಮಲ್ಯದಂತೆ ಮನಮೋಹಿಪವು ಕಣ್ಣುಗಳು : *(ಮುತ್ತಿಡುವಳು)*
*(ತೆರೆಯಲ್ಲಿ "ಕೆಳದೀ, ಎಲ್ಲಿರುವೆ?" ಎಂದು ಸಖಿಯರ ಮಾತು ಕೇಳಿಸುವುದು)*

ಅಯ್ಯೋ, ಈಗೇನು ಮಾಡುವುದು? ಕಂದನನೆಲ್ಲಿ ಅಡಗಿಸಲಿ? ಕೆಳದಿಯರು ಬಂದು ನೋಡಿದರೆ ಏನು ಹೇಳುವರು? ಅಯ್ಯೋ ಮುಂದನರಿಯದೆ ಅಪರಾಧ ಮಾಡಿದೆನಲ್ಲಾ. ಕಂದನನ್ನು ಮನೆಗೆಂತು ಕೊಂಡುಹೋಗಲಿ? ತಂದೆತಾಯಂದಿರು ಏನನ್ನುವರು? ಲೋಕಾಪವಾದಕ್ಕೆ ಗುರಿಯಾಗುವೆನಲ್ಲಾ! ಕುಂತಿ ಭೋಜನ ಮಗಳು ಕನ್ನೆತನದಲ್ಲಿ ಕೂಸನ್ನು ಹೆತ್ತಳು ಎಂದು ಲೋಕವೇ ನಿಂದಿಸುವುದಲ್ಲಾ! ಹೇ ಸೂರ್ಯದೇವ, ನಿನಗೆ ಸಾವಿರ ನಮಸ್ಕಾರ! ನನ್ನ ಕಂದನ ಮರಳಿ ಹಿಂದಕ್ಕೆ ತೆಗೆದುಕೋ! ಹುಡುಗಾಟದಿಂದ ತಪ್ಪುಮಾಡಿದೆನು. ತರಳತನದ ಅಪರಾಧವನ್ನು ಕ್ಷಮಿಸು; ಬಾ! *(ಮಗುವನ್ನು ನೋಡಿ ಕಂಬನಿ ಸುರಿಸುತ್ತಾ)* ಎಲೆ ಕಂದ, ನಿನ್ನಂತಹ ಕುಮಾರನನ್ನು ಪಡೆದ ತಾಯಿಗೆ ಸಮ್ಮಾನವಲ್ಲದೆ ದುಮ್ಮಾನವಿರಬಾರದು. ಆದರೂ ಕನ್ನೆತನದಲ್ಲಿ ನಿನ್ನನು ಹೆತ್ತು ನಿನಗೆ ಮಹದಪರಾಧ ಮಾಡಿದೆನು. ನನ್ನನ್ನು ಮನ್ನಿಸು, ಕಂದ! ಇನ್ನೇನು ಮಾಡಲಿ? ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತವಾವುದು? ಮನೆತನಕ್ಕೆ ಅಪಕೀರ್ತಿಯನ್ನು ತಂದೆನಲ್ಲಾ. ಹೇ ಮುನಿವರನೆ, ನೀನು ದಾನಮಾಡಿದ ರತ್ನವು ಮರುಳಾದ ನನಗೆ ಕೆಂಗೆಂಡವಾಯ್ತೇ? ಅಪಮಾನಕಿಂತ ಸಾವೇ
ಲೇಸು. *(ಗಂಗೆಯನ್ನು ನೋಡಿ)* ಸುರನರರ ಪಾಪಗಳ ತೊಳೆಯುತ್ತ ಹರಿಯುತಿಹ ದಿವಿಜ ನದಿಯೇ, ನನ್ನ ಕಂದನ ಮುಡಿದು ನಿನಗೆನ್ನನರ್ಪಿಸುವೆ. ನನ್ನ ಪಾಪವನು ಪರಿಹರಿಸಿ ಪಾವನೆಯನ್ನಾಗಿ ಮಾಡು. ಹೇ ಸೂರ್ಯದೇವ, ನನ್ನ ತಪ್ಪನು ಮನ್ನಿಸು. ಪರಮ ತೇಜಸ್ವಿಯೂ, ಕರುಣಾಶಾಲಿಯೂ ಆದ ಓ ಋಷಿ ತಿಲಕನೆ, ನನಗೆ ಆಶೀರ್ವಾದ ಮಾಡು. ದೇವಿ, ಗಂಗಾಮಾತೆಯೆ, ಇದೋ ಪಾಪಿಯನು ಸ್ವೀಕರಿಸು!
*(ಗಂಗೆಯ ತಡಿಗೆ ಹೋಗಿ ಕೂಸಿನೊಡನೆಯೆ ಹಾರಲೆಳಸುವಳು. ಗಂಗಾಮಾತೆಯು ಮೈ ದೋರಿ ಆಕೆಯನ್ನು ತಡೆಯುವಳು.)*

**ಗಂಗಾಮಾತೆ** – ಮಾಣು, ಮಾಣೆಲೆ ಬಾಲೆ, ದುಡುಕದಿರು, ಕೆಡಿಸದಿರು,
ನಿನ್ನ ಬಾಳಿನ ಬೆಳಕ. ನಿನ್ನ ಕೈಲಿಹ ಮಹಾ
ಜ್ಯೋತಿಯನು ಕತ್ತಲೆಗೆ ಶರಣು ಮಾಡದಿರು.
ಜೀವನದ ಲತೆ ಚಿಗುರಿ ಹೂವಾಗಿ ಕಾಯಾಗಿ
ಹಣ್ಣಾಗುವಾ ಮುನ್ನ ಬೇರ್ಗೊಯ್ದು ಬಿಸುಡದಿರು.
ನಿನ್ನ ಚಿಂತೆಯ ನಾನು ನೀಗುವೆನು, ಭಯವೇಕೆ?

**ಕುಂತಿ** – *(ತಲೆಬಾಗಿ)* ನಮಿಸುವೆನು, ಮಾತಾಯಿ ಲೋಕಾಪವಾದಕ್ಕೆ
ಗುರಿಯಾಗುವಾ ಕಾಲ ಬಂದಿರುವುದೆನಗೆ!
ತರಳತನದಿಂದ ಮುನಿವರನಿತ್ತ ವರಬಲವ-
ನರಿಯದೆ ದುರುಪಯೋಗ ಪಡಿಸಿಹೆನು. ತಪ್ಪಿದೆನು;
ಹೇಗಾದರೂ ಮಾಡಿ ಲೋಕಾಪವಾದಕ್ಕೆ
ಗುರಿಯಾಗುದಂತೆ ದಾರಿಯ ತೋರು, ಮಾತಾಯಿ!

**ಗಂಗಾಮಾತೆ** – ನಾನೆಲ್ಲ ಅರಿತೆಹೆನು; ನಾನೆಲ್ಲ ನೋಡಿದೆನು;
ನಿನ್ನ ಮಾನವನುಳುಹಿಕೊಳೆ ಯತ್ನಿಸುವೆಯಾದರೆ *(ಕರ್ಣನನ್ನು ತೊರಿಸಿ)*

ಈ ಮಹಾತ್ಮನ ಜೀವಮಾನವನು ಕೆಡಿಸಿದಂ-
ತಾಗುವುದು. ಜಗದಲ್ಲಿ ಹಿಂದೆ ಎಂದೆಂದಿಗೂ
ತಾಯಿಯರು ಎಸಗದಿಹ ಪಾಪಕ್ಕೆ ಪಕ್ಕಾಗುವೆ;
ಮುಂದೆ ನೀನದಕಾಗಿ ಪರಿತಪಿಸಲೇ ಬೇಕು;
ಸ್ವಾರ್ಥತೆಗೆ ತಕ್ಕ ಪ್ರಾಯಶ್ಚಿತ್ತ ದೊರಕುವುದು
ವಿಧಿನಿಯಮ, ಅದನು ಮೀರುವರಾರು ಇಲ್ಲ!
ನಿನ್ನ ಕಂದನನೆನಗೆ ಕೆಯ್ಯೆಡೆಯಾಗಿ ಕೊಡು;
ನಾನೀತನನು ಸಾಕಿ, ಸಲಹುವಂತೆಸಗುವೆನು.
*(ಕುಂತಿಯು ಕರ್ಣನನ್ನು ದಿಟ್ಟಿಸಿ ನೋಡುತ್ತ, ಕಂಬನಿ ತುಂಬಿ ಮುದ್ದಿಸುತ್ತ)*

**ಕುಂತಿ** – ಎಲೆ ಮುದ್ದು ಮಗನೆ, ನನ್ನ ತಪ್ಪನು ಕ್ಷಮಿಸು!
ಮಾತಾಯಿ, ತೆಗೆದುಕೋ ನನ್ನ ಜೀವನನಿದೋ
ನಿನ್ನ ಕೈಯಲ್ಲಿಡುವೆ. *(ಕೊಡುವಳು)* ಎನ್ನ ಬಾಳಿನ ಕಣ್ಣೆ,
ಹರಿಗಿಂತ ಮಿಗಿಲಾದ ಸಂರಕ್ಷಕರು ಯಾರು?
ಗಂಗೆಗಿಂತಲು, ಕಂದ, ಮಿಗಿಲಾದ ತಾಯಿಯರು
ಯಾರಿಹರು? ಗಂಗೆಯನು ತಾಯಾಗಿ ಪಡೆದಿರುವ
ನೀನೆ ಧನ್ಯನು, ಕಂದ. ಸಲಹಲಾರದೆ ನಿನ್ನನೀ
ಪರಿಯೊಳಗಲುತಿಹೆ ನಾನೆ ಪಾಪಿಯು, ಕಂದ!
ಮಾತಾಯಿ, ನಿನಗೆ ನಾನೆಂದೂ ಚಿರಋಣಿ!
*(ತೆರೆಯಲ್ಲಿ "ಸಖೀ, ಕುಂತಿ, ಎಲ್ಲಿರುವೆ? ಹೊತ್ತಾಯ್ತು, ಹೋಗೋಣ ಬಾಬೇಗ"* ಎಂಬ ಸದ್ದು ಕೇಳುವುದು)
ಮಾತಾಯಿ, ಸಖಿಯರೆನ್ನರು ಕರೆಯುತಿಹರದೋ,
ಕೇಳುವೆನು, *(ಕರ್ಣನನ್ನೆ ಹಿಂತಿರುಗಿ ನೋಡುತ್ತಾ ಹೋಗುವಳು, ಮತ್ತೆ ಓಡಿಬಂದು)*
ತೊರೆಯಮ್ಮಾ, ಮತ್ತೊಮ್ಮೆ ಕಂದನನು
ಕಣ್ದಣಿಯೆ ನೋಡಿ, ಮನದಣಿಯೆ ಮುದ್ದಿಸುವೆ....
*(ಮಗುವನ್ನು ತೆಗೆದುಕೊಂಡು ನೋಡಿ, ಮುದ್ದಿಸಿ, ಕೊಟ್ಟು ಹೋಗುವಳು)*

**ಗಂಗಾಮಾತೆ** – ನೀನು ಮಾಡುವುದೇನು, ಕುಂತಿ? ವಿಧಿಲೀಲೆಯಿದು!
ಮುಂದೆ ಬರುವಾ ಮಹಾಭಾರತದ ನಾಟಕಕೆ
ನಾಂದಿಯನು ಬರೆಯುತಿದೆ ಬಿದಿ. ನಾವೆಲ್ಲ
ಸೂತ್ರಧಾರನ ಕೈಲಿ ಬೊಂಬೆಗಳು. ಪಾತ್ರಗಳ
ವಹಿಸುವರು. ಕುಣಿಸಿದಂತೆಯೆ ಕುಣಿಯುತಿರುವೆವು.
*(ಒಂದು ಕಡೆಗೆ ನೋಡಿ)*
'ಓಹೋ ಮೀಗುಲಿಗನಿಲ್ಲಿಯೇ ಬರುತಿಹನು;

ಈ ಮಗುವನಿಲ್ಲಿಟ್ಟು ಮರೆಯಾಗಿ ನೋಡುವೆನು,
ಸೂತನೀತನ ಕಂಡು ಕೊಂಡೊಯ್ದರೊಳ್ಳೆಯದೆ!
*(ಮಗುವನ್ನು ಅಲ್ಲಿಟ್ಟು ಮರೆಯಾಗುವಳು. ಸೂತನು ಬಲೆಯನ್ನು ಹಿಡಿದು ಪ್ರವೇಶಿಸುವನು)*

**ಸೂತ** – ಏನು ದುರ್ದಿನವಪ್ಪಾ? ಎಷ್ಟು ಪ್ರಯತ್ನಿಸಿದರೂ ಒಂದು ಮೀನಾದರೂ ಸಿಕ್ಕ ಬೇಕಲ್ಲಾ! ಗಂಗಾದೇವಿಗೆ ಕೈಮುಗಿದು, ಅಡ್ಡಬಿದ್ದು ಸುಮ್ಮನೆ ಬಳಲಿಹೋದೆ. ಇನ್ನು ಬರಿಯ ಕೈಯಲ್ಲಿ ಮನೆಗೆ ಹೋದರೆ ರಾಧೆ ಸುಮ್ಮನಿರುವುದಿಲ್ಲ. ಈಗಾಗಲೆ ಬಹಳ ಹೊತ್ತಾಗಿದೆ. ಇಷ್ಟು ಹೊತ್ತು ಅಲೆದು ಏನೂ ಇಲ್ಲದೆ ಹೋದರೆ ನನಗೆ ಸುಖವಿಲ್ಲ. ಏನು ಮಾಡಲಿ?
*(ಅತ್ತ ಇತ್ತ ನೋಡುತ್ತಾ ಮುಂದೆ ಬಂದು ಶಿಶುವನ್ನು ನೋಡಿ ಬೆಚ್ಚುವನು)*
ಇದೇನಿದು? ಯಾರ ಮಗುವಿದು? *(ಸುತ್ತ ನೊಡಿ)* ಯಾರೂ ಇಲ್ಲಿಲ್ಲ. ಈ ರೀತಿ ಹೆತ್ತ ಮಗುವನ್ನು ಮರೆತುಹೋಗುವ ತಾಯಿ ಎಂತಹಳಪ್ಪಾ! *(ಕೂಗಿ ಕರೆಯುವನು)* ಅಮ್ಮಾ! ಅಮ್ಮಾ! – ಇದೇನನ್ಯಾಯ? ಹೆತ್ತ ಮಗುವನ್ನು ಬಿಸಾಡಿ ಹೋಗುವುದು? *(ಹತ್ತಿರ ಬಂದು ನೋಡಿ)* ಅಯ್ಯೋ ಮಗುವೋ ರನ್ನದ ಗೊಂಬೆ ಇದ್ದಂತೆ ಇದೆ! ಯಾರಿಗೆ ಮನಸ್ಸು ಬಂತಪ್ಪಾ ಇಂಥಾ ಶಿಶುವನ್ನು ಬಿಟ್ಟು ಹೋಗುವುದಕ್ಕೆ? ಅರಸು ಮಕ್ಕಳು ಕೂಡ
ಹೀಗಿರುವುದಿಲ್ಲ. *(ಮಗುವನ್ನು ಎತ್ತಿಕೊಳ್ಳುವನು)* ಎಂಥಾ ಸುದಿನವಪ್ಪಾ! ನನ್ನ ರಾಧೆ ಮಕ್ಕಳಿಲ್ಲ, ಮಕ್ಕಳಿಲ್ಲ ಎಂದು ಸುಮ್ಮನೆ ದಿನವೂ ನನ್ನ ಬೈಯ್ತಾಳೆ. ಈ ಮಗುವನ್ನು ಅವಳಿಗೆ ಕೊಟ್ಟು ಇನ್ನು ಮುಂದೆ ಬೈಗುಳವನ್ನಾದರೂ ತಪ್ಪಿಸಿಕೊಳ್ತೇನೆ! *(ದೂರ ನೋಡಿ)* ಅಗೋ ಅವಳೂ ಇಲ್ಲಿಗೇ ಬಂದೇ ಬಿಟ್ಟಳು. *(ರಾಧೆ ಪ್ರವೇಶಿಸುತ್ತಾ)*

**ರಾಧೆ** – ಇದೇನು ನಿಮ್ಮ ಆಟ! ಊಟಮಾಡದೆ ನಿಮಗಾಗಿ ಕಾದು ಕಾದು ಸಾಕಾಯ್ತು! ಎಷ್ಟು ಗಾಡಿ ಮೀನು ಸಿಕ್ಕಿತು? *(ಸೂತನು ನಗುತ್ತಾ ಮಗುವನ್ನು ತೋರಿಸುವನು)* ಇದು ಯಾರ ಮಗು? ಯಾರ್ಯಾರ ಮಕ್ಕಳನ್ನೋ ಎತ್ತಿಕೊಂಡು! ಇದೇನು ಕೆಲಸ? ನಿಮಗೇನು ಅರುಳೋ ಮರುಳೋ? ಮಕ್ಕಳಾಡಿಸುವುಕ್ಕೇನು ನೀವು ದಿನಾ ಬಲೆ ತೆಗೆದುಕೊಂಡು ಬರುವುದು? ಈಗ ಗೊತ್ತಾಯಿತು! ಮೀನಿಲ್ಲ! ಮೀನಿಲ್ಲ! ಗಂಗಮ್ಮನಲ್ಲಿ ಮೀನೇ ಇಲ್ಲ! ಹೀಗೆ ಯಾವಳ ಮಗುವನ್ನೋ ಆಡಿಸುತ್ತಾ ಕೂತುಕೊಂಡರೆ ಮೀನು ಸಿಕ್ಕುವುದು ಹೇಗೆ?

**ಸೂತ** – ಹೇಳು, ಹೇಳು, ಇನ್ನೂ ಹೇಳು!

**ರಾಧೆ** – ಏನು ಹೇಳುವುದು? ಹೇಳಿದ್ದು ಸಾಲದೆ, ಮರ್ಯಾದೆ ಇದ್ದರೆ?

**ಸೂತ** – ಅಲ್ಲ ಕಣೇ,

**ರಾಧೆ** – ಏನು ಅಲ್ಲಕಣೇ? ಸಾಕು, ಬೇಗ ಬನ್ನಿ, ಮಗುವನ್ನು ಕೊಟ್ಟು!

**ಸೂತ** – ಯಾರಿಗೆ ಕೊಡಲಿ? ನೀನೆ ತೆಗೆದುಕೋ!

**ರಾಧೆ** – ನಿಮಗೆ ಸ್ವಲ್ಪವೂ ನಾಚಿಗೆಯಿಲ್ಲ, ಯಾರು ಕೊಟ್ಟರೋ ಅವರಿಗೆ ಕೊಡಿ.

**ಸೂತ** – ಅಯ್ಯೋ ರಾಧೆ, ಇದ್ಯಾಕೆ, ಹೀಂಗಾಡ್ತಿಯಾ, ಯಾರೂ ಕೊಡಲಿಲ್ಲ ಕಾಣೆ, ಇಲ್ಲಿಯೆ ಬಿದ್ದಿತ್ತು!

**ರಾಧೆ** – ಬಿದ್ದಿತ್ತು! ಆಕಾಶದಿಂದ ಬಿತ್ತೇನೊ?

**ಸೂತ** – ಆಕಾಶದಿಂದ ಬಿತ್ತೋ? ಭೂಮಿಯಿಂದ ಬಿತ್ತೊ? ನನಗೆ ಗೊತ್ತಿಲ್ಲ. ಅಂತೂ ಇಲ್ಲಿತ್ತು.

**ರಾಧೆ** – ಇದೇನು ಹುಡುಗಾಟ ಮಾಡ್ತೀರೋ ಏನು?

**ಸೂತ** – ನಿನ್ನ ದೆಸೆಯಿಂದ ಹುಡುಗಾಟದ ಕಾಲ ಹೋಯ್ತು ಕಣೇ! ಹುಡುಗಾಟ ಗಿಡುಗಾಟ ಒಂದೂ ಅಲ್ಲ. ನಿಜವಾಗಿಯೂ ಇಲ್ಲಿ ಬಿದ್ದಿತ್ತು. ಮಕ್ಕಳಿಲ್ಲ, ಮಕ್ಕಳಿಲ್ಲ, ಅಂತ ದಿನಾ ಬಡುಕೊಳ್ತೀಯಲ್ಲಾ, ಅದಕ್ಕೇ ನಿನಗಾದರೂ ಕೊಡೋಣ ಅಂತ ಎತ್ತಿ ಎತ್ತಿಕೊಂಡೆ. ಬಾ ತೆಗೆದುಕೋ. *(ರಾಧೆ ಹತ್ತಿರ ಬಂದು ನೋಡಿ)*

**ರಾಧೆ** – ಅಯ್ಯೋ ಇದಾವುದೋ ರಾಜರ ಮಗು. ನಮಗೇಕಪ್ಪಾ ಇದರ ಸಹವಾಸ? ಆಮೇಲೆ ನಮ್ಮ ತಲೆಗೆ ಬಂದೀತು.

**ಸೂತ** – ಕೂಗಿದೆ, ಕರೆದೆ. ಯಾರೂ ಇಲ್ಲ. ನಾನು ಬರದೆ ಇದ್ದಿದ್ದರೆ ಮಗು ಮಣ್ಣು ಪಾಲಾಗುತಿತ್ತು. ಪಾಪ! ಇದಕ್ಕೆ ಯಾರೂ ಗತಿಯಿಲ್ಲ. ನಾವಾದರೂ ಸಾಕೋಣ.
*(ರಾಧೆ ಬಂದು ಮಗುವನ್ನು ಎತ್ತಿಕೊಂಡು)*

**ರಾಧೆ** – ಅಯ್ಯೋ, ಈ ಸುಖ ನಾನು ಕನಸಿನಲ್ಲಿಯೂ ಕಂಡಿರಲಿಲ್ಲ. *(ಮಗುವನ್ನು ಮುದ್ದಿಸುವಳು)* ದೇವರೇ ಕೊಟ್ಟ!

**ಸೂತ** – ನಡೆ ಹೊಗೋಣ. ಮನೆಯಲ್ಲಿ ಇಂದು ಹಬ್ಬ
ಮಾಡಬೇಕು. *(ಇಬ್ಬರೂ ಹೋಗುವರು. ಗಂಗಾಮಾತೆ ಹೊರಗೆ ಬಂದು)*

**ಗಂಗಾಮಾತೆ** – ನೀನೆ ಧನ್ಯನು, ಸೂತ, ಪುಣ್ಯವಂತಳು ರಾಧೆ!
ನಿನ್ನ ಬಲೆಗಿನ್ನೆಂದೂ ಮೀನುಗಳ ಬದಲಾಗಿ
ರತ್ನಗಳು ಸಿಗುವಂತೆ ಮಾಡುವೆನು! ಮುಂದೆಂದೂ
ನಿನ್ನ ಬಲೆ ಕಾಮಧೇನುವಿನಂತೆ ಬೇಕಾದ
ಬಯಕೆಗಳ ಸಲ್ಲಿಸಲಿ! ಕಲ್ಪತರುವಿನ ತರದಿ
ಬೇಕು ಬೇಕಾದ ವಸ್ತುಗಳ ದಯಪಾಲಿಸಲಿ!

*(ಪರದೆ ಬೀಳುವುದು)*

# ದೃಶ್ಯ - ೧

*(ಹಳ್ಳಿಯ ಹೊರಗಡೆಯ ಒಂದು ಸಣ್ಣ ಬನ. ಹುಡುಗನಾದ ಕರ್ಣನು ಒಂದೆಡೆ ಕುಳಿತು ಚಿಂತಾಮಗ್ನನಾಗಿರುವನು.)*

**ಕರ್ಣ** – ನನ್ನಾತ್ಮವೇಕಿಂತು ಚಲಿಸುವುದೊ ನಾನರಿಯೆ.
ನಮ್ಮ ಹಳ್ಳಿಯ ಬಾಂದಳವು ನನಗೆ ಕಿರಿದಾಗಿ
ತೋರುವುದು. ನಮ್ಮ ಹಳ್ಳಿಯ ಗದ್ದೆ ತೋಟಗಳು
ನನ್ನ ಸಂಚಾರಕ್ಕೆ ಸಾಲದಾಗಿಹವು.
ನಮ್ಮಹಳ್ಳಿಯ ಜೀವನದೊಳನೆಗೆ ತೃಪ್ತಿಯಿಲ್ಲ!
ಬಲಗೆ ಒಳಗಾದ ಕೇಸರಿಯಂತೆ ಎದೆಯೇಕೊ
ಹೋರಾಡಿ ಹಾರಾಡಿ ಹೊರಳುತಿದೆ. ಮೂಡಣದ
ತರುಣಾರುಣೋದಯವು ನಾನರಿಯದಾವೊದೋ
ಸಂದೇಶವನು ತಿಳುಹಿ ಕೈಬೀಸಿ ಕರೆಯುವುದು;
ತಣ್ಣೆಲರೊಳೊಲೆಯುತಿಹ ಒಂದೊಂದು ಕುಸುಮವೂ
ದೂರದಾವುದೊ ಒಂದು ಸುದ್ದಿಯನು ಹೇಳಿ
ಮೂದಲಿಸಿ ಮೋಹಿಸುದೆನ್ನನು! ಕೋಗೊಲೆಯು
ಮರಗಳಲಿ ಹಾಡುತಿರೆ ದೂರದಾವುದೊ ಮೈಮೆ
ಬೇರೆ ನುಡಿಯಲ್ಲೆನ್ನ ಕರೆದಂತೆಯಾಗುವುದು!
ಮುದ್ದಿಸುವ ತಂಬೆಲರು ಕೂಡ ಬೇರೊಂದು
ಲೋಕದಿಂದೈತಂದು ಬೇರೊಂದು ಜೀವನದ
ತೆರೆಮರೆಯ ತೆರೆಯುತಿಹ ದೂತನಂತಿಹುದೆನಗೆ!
ಕನಸುಗಳು ಕೂಡ ಬೇರೊಂದು ಚಿತ್ರವನು
ತೋರುವುವು. ನಮ್ಮ ಹಳ್ಳಿಯ ತೊರೆಯಲಾಡುವುದು
ಸ್ವಪ್ನಸಾಮ್ರಾಜ್ಯದಲಿ ಸುಳಿದಿಲ್ಲ. ಹಳ್ಳಿಗೆರೆಯರ
ಕೂಡೆ ನಾನಾಡುವುದು ಕನಸಿನಲಿ ಬಂದಿಲ್ಲ.
ಯುದ್ಧಗಳು, ಬಿಲ್ಲುಗಳು, ಬಾಣಗಳು, ನೃಪತಿಗಳು,
ಇವುಗಳೇ ನನ್ನ ಕನಸಿನ ಲೋಕ! ಏತಕೋ
ನಾನರಿಯೆ! ಈ ಮಹಾ ಧಾರಿಣಿಯ ಕರೆಯೆನಗೆ
ಬಂದಿಹುದು! ಇನ್ನು ನಾನಿಲ್ಲಿ ಕೊಟ್ಟಿಗೆಯ
ಕರುವಂತೆ ಬಂಧನದೊಳಿರಲಾರೆ, ತಾಯಿಯನು
ಒಪ್ಪಿಸುವೆ; ತಂದೆಯಾಣೆಯ ಪಡೆದು ತೆರಳುವೆನು. *(ಸುಮ್ಮನಿದ್ದು)*
ಅಂದೆಮ್ಮ ತೊರೆಯ ಬಳಿ ನಾನು ಕುಳಿತಿರುವಾಗ

ತೇಜಸ್ವಿಯಾದೊಬ್ಬ ವೃದ್ಧಮೂರ್ತಿಯ ಕಂಡೆ.
ಅಂದಿನಿಂದೆನ್ನಾತ್ಮ ಕದಡಿದಂತಾಗಿಹುದು.
ಎಂತಹ ಮಹಾಮೂರ್ತಿ! ಸಾಗರದ ಗಾಂಭೀರ್ಯ!
ದಿನಕರನ ತೇಜಸ್ಸು! ಹೆಗಲ ಮೇಲೊಂದು ಕೊಡಲಿ!
*(ಹಿಂದಿನಿಂದ ರಾಧೆ ಮೆಲ್ಲನೆ ಬಂದು ದೂರ ನಿಲ್ಲುವಳು)*
ಇಲ್ಲ, ನನಗೀ ಹಳ್ಳಿ ಸಾಲದು! ಬಿರುಗಾಳಿ
ಕದಡಿರುವ ಕಡಲಂತೆ ಹೃದಯ ಉಕ್ಕುತಿದೆ.
ದೂರದಾವುದೊ ವಾಣಿ ಗಿರಿಯಾಚೆಯಿಂದ
ಕೂಗಿ ಕರೆಯುವುದೆನ್ನ. ಕರೆದೆಡೆಗೆ ತೆರಳುವೆನು!

**ರಾಧೆ** – ಕಂದ, ಏನನಾಲೋಚಿಸುತ ಕುಳಿತಿರುವೆ ಇಲ್ಲಿ. ಕೆಲವು ದಿವಸಗಳಿಂದ ನಿನ್ನ ರೀತಿಯೆ ಬೇರೆಯಾಗಿದೆ. ಏಕಾಂಗಿಯಾಗಿರುವೆ, ಏನೇನೊ ಯೋಚಿಸುವೆ. ಮೈ ಸ್ವಸ್ಥವಿಲ್ಲವೇನು?

**ಕರ್ಣ** – *(ಹಿಂತಿರುಗಿ ತಾಯಿಗೆ ವಂದಿಸಿ ಎದ್ದುನಿಂತು)* ಅಮ್ಮ, ಮೈಯೇನೊ ಸ್ವಸ್ಥವಾಗಿಯೆ ಇದೆ, ನೀನೇನೂ ಹೆದರಬೇಡ.

**ರಾಧೆ** – ಮತ್ತೇನು?

**ಕರ್ಣ** – ಅಮ್ಮಾ, ಈಚೀಚೆಗೆ ನನ್ನ ಚಿತ್ತದಲ್ಲಿ ಏನೋ ಅಶಾಂತಿ.

**ರಾಧೆ** – ಯಾಕೆ, ಮಗೂ?

**ಕರ್ಣ** – ಅಮ್ಮಾ, ನೀನಿಲ್ಲಿ ಕುಳಿತುಕೊ. ಆಮೇಲೆ ಎಲ್ಲಾ
ಹೇಳುವೆನು. *(ರಾಧೆ ಅರೆಯ ಮೇಲೆ ಕುಳಿತುಕೊಳ್ಳುವಳು. ಕರ್ಣನು ಕೆಳಗೆ ಕುಳಿತು ಆಕೆಯ ತೊಡೆಯ ಮೇಲೆ ಕೈ ಯಿಟ್ಟು ಕೊಳ್ಳುವನು. ರಾಧೆ ಅವನನ್ನು ಮುದ್ದಿಸಿ)*

**ರಾಧೆ** – ಕಂದ, ನೀನೆಮ್ಮ ಜೀವದ ಜೀವ. ನಿನಗಿನಿತು ಅಶಾಂತಿಯುಂಟಾದರೂ ನನ್ನೆದೆ ಹಾರುವುದು. ನೀನಿಂತು ಏಕಾಂಗಿಯಾಗಿ ತಿರುಗುವುದನ್ನೂ, ಒಬ್ಬನೆ ಒಂದು ಕಡೆ ಕುಳಿತು ಆಲೋಚಿಸುವುದನ್ನೂ ಕಂಡು ನನಗೇಕೊ ಹೆದರಿಕೆ ಉಂಟಾಗಿದೆ, ಮಗು, ನಿನಗೇನು ಬೇಕೋ ಹೇಳು. ಮನಸ್ಸಿನಲ್ಲಿ ಅಶಾಂತಿಗೆ ಏನು ಕಾರಣ?

**ಕರ್ಣ** – ಅಮ್ಮಾ, ನನ್ನ ಮನಸ್ಸಿನಲ್ಲಿ ಕನಸಿನ ಚಿತ್ರಗಳಂತೆ ಏನೇನೋ ನೋಟಗಳು ಇದ್ದಕ್ಕಿದ್ದ ಹಾಗೆ ಸುಳಿಯುವುವಲ್ಲಾ ಏಕೆ?

**ರಾಧೆ** – ಏನು ಚಿತ್ರಗಳು?

**ಕರ್ಣ** – ಅಮ್ಮಾ, ಏನೇನೋ ಚಿತ್ರಗಳು! ಅವುಗಳ ಅರ್ಥವೇ ನನಗೆ ಗೊತ್ತಾಗುವುದಿಲ್ಲ, ಕೆಲವು ಸಾರಿ ನಾನು ಯಾವುದೋ ಒಂದು ಮಹಾಯುದ್ಧರಂಗದಲ್ಲಿ ರಾಜಾಧಿರಾಜರುಗಳ ನಡುವೆ ಕಾದುವಂತೆ ತೋರುವುದು. ಕೆಲವು ಸಾರಿ ಯಾವನೋ ಒಬ್ಬ ಮಹಾತ್ಮನಲ್ಲಿ ಶಸ್ತ್ರಾಸ್ತ್ರಗಳ ಅಭ್ಯಾಸಮಾಡುವಂತೆ ಕಾಣುವುದು. ಕೆಲವು ಸಾರಿ ರತ್ನಖಚಿತವಾದ ಕಿರೀಟವನ್ನು ಧರಿಸಿರುವ ಯಾವನೋ ಒಬ್ಬ ಮಹಾಚಕ್ರ ವರ್ತಿಯೊಡನೆ ಸರಸದಿಂದ ಕೈಹಿಡಿದು ಆಡುವಂತೆ ಕಾಣುವುದು. ಹೀಗೆಯೇ ಇನ್ನೂ ಅನೇಕ ಚಿತ್ರಗಳು. ಹೊಳೆಯುವುವು!

**ರಾಧೆ** – *(ಸ್ವಲ್ಪ ಹೊತ್ತು ಚಿಂತಿಸಿ, ಸ್ವಗತ)* ಕಂದಾ, ನೀನಾವ ಮಹಾ ಪುಣ್ಯ ಪುರುಷನ ಮಗನೋ ನಾ ಕಾಣೆ. ನಿನ್ನ ಮಹಾ ಆತ್ಮಕ್ಕೆ ನಮ್ಮ ಬಡ ಜೀವನದ ಕಳವಳಗಳು ಸಾಕಾಗುವುವೇ? *(ಬಹಿರಂಗ)* ಮಗೂ, ಅವೆಲ್ಲಾ ಬರಿಯ ಚಿತ್ರಗಳು! ಹುಡುಗರಿಗೆ ಸಹಜ! ನಿನಗೆ ನಾನು ಹೇಳಿದ ಚಕ್ರವರ್ತಿಗಳು ರಾಜರು ಯದ್ಧಗಳು ಇವುಗಳ ವಿಚಾರವಾದ ಕತೆಗಳು ನಿನ್ನ ಮನಸ್ಸಿನಲ್ಲಿ ಚಿತ್ರದಂತೆ ಸುಳಿದಾಡುವುವು. ಅಷ್ಟೇ ಹೊರತು ಮತ್ತೇನೂ ಇಲ್ಲ!

**ಕರ್ಣ** – ಅಷ್ಟೇ ಅಲ್ಲಮ್ಮಾ; ನನ್ನೆದೆಗೆ ಈ ನಮ್ಮ ಗ್ರಾಮದ ವಿಸ್ತಾರವೆ ಸಾಕಾದಂತೆ ತೋರುವುದಿಲ್ಲ. ದಿನದಿನಕ್ಕೂ ಹೃದಯ ಬೆಳದಂತೆ ತೋರುವುದು. ಕೆಲವು ಸಾರಿ ನೀರಿನೊಳಗೆ ಮುಳುಗಿ ಉಸಿರಾಡದವನಂತೆ ನನಗೆ ಇಲ್ಲಿಯ ಜೀವಿತದೆ ಬಹಳ ಆಯಾಸಕರವಾಗಿ ತೋರುವುದು. ಕೆಲವು ಸಾರಿ ಯಾರೋ ದೂರದ ದಿಗಂತದ ಮಬ್ಬಿನಲ್ಲಿ ನಿಂತು ನನ್ನನ್ನು ಕೈಬೀಸಿ ಕರೆದಂತೆ ತೋರುವುದು.

**ರಾಧೆ** – ಮಗೂ, ನಿನಗೆ ಏನು ಬೇಕಾದರೂ ಕೊಡಲು ನಾನು ಸಿದ್ಧಳಾಗಿರುವೆ. ಬಾಲ್ಯವು ತಾರುಣ್ಯದ ಸೋಪಾನವನ್ನು ಏರುವಾಗ ಹೀಗೆಲ್ಲಾ ಆಗುವುದು ವಿಚಿತ್ರವಲ್ಲ.

**ಕರ್ಣ** – ಅಮ್ಮಾ, ನನಗೆ ಇನ್ನೇನೂ ಬೇಕಾಗಿಲ್ಲ. ನನಗೆ ಬಿಲ್ಲಂಬುಗಳ ವಿದ್ಯೆಯನ್ನು ಕಲಿಯ ಬೇಕೆಂದು ಕುತೂಹಲ. ಅದಕ್ಕೆ ನಿನ್ನ ಮತ್ತು ತಂದೆಯ ಅಪ್ಪಣೆಯಾದರೆ ಸಾಕು. ಹೋಗಿ ಯಾವ ಗರುವನ್ನಾದರೂ ಆಶ್ರಯಿಸಿ ವಿದ್ಯೆಯನ್ನು ಕಲಿತು ಹಿಂತಿರುಗಿ ಇಲ್ಲಿಗೇ ಬರುವೆನು. ಅಮ್ಮಾ ನಿನ್ನನ್ನು ನಾನೆಂದಿಗೂ ಮರೆಯುವುದಿಲ್ಲ; ಕೈಬಿಡುವುದಿಲ್ಲ.

**ರಾಧೆ** – ಮಗೂ, ನಿನ್ನಿಷ್ಟಕ್ಕೆ ಅಡ್ಡಬರುವ ತೊಂದರೆಗಳನ್ನು ನೀನರಿಯೆ. ನಾವು ಬೆಸ್ತರ ಜಾತಿಯವರು. ಶಸ್ತ್ರ ಶಾಸ್ತ್ರಾಚಾರ್ಯರೆಲ್ಲಾ ಬ್ರಾಹ್ಮಣರು. ನೀನು ಬೆಸ್ತರವನೆಂದು ತಿಳಿದರೆ ಅವರು ನಿನಗೆಂದಿಗೂ ವಿದ್ಯೆ ಬೋಧಿಸಲಾರರು. ಅಲ್ಲದೆ ಅಸಹಾಯನಾಗಿ ಹೊರಗೆ ಹೋಗಲು ನೀನಿನ್ನೂ ಸಣ್ಣವನು.

**ಕರ್ಣ** – ಅಮ್ಮಾ, ಅದರ ಚಿಂತೆ ನಿನಗೇಕೆ? ಗುರುಗಳಿಗೆ ನಾನು ಯೋಗ್ಯನೆಂದು ತೋರಿದರೆ, ನನ್ನ ಭಕ್ತಿಗೆ ಮೆಚ್ಚಿ ವಿದ್ಯಾಭ್ಯಾಸ ಮಾಡಿಸದಿರರು. ಆ ಯೋಗ್ಯತೆಯನ್ನು ತೋರಿಸಿ, ಅವರನ್ನು ಮೆಚ್ಚಿಸಿ, ಅವರ ಪ್ರೀತಿಗೆ ಪಾತ್ರನಾಗುವುದು ನನ್ನ ಕೈಯಲ್ಲಿದೆ. ನಾನಿನ್ನೂ ಸಣ್ಣವನು ಎಂದೇಕೆ ನಿನಗೆ ಕಳವಳ? ನಾನು ಸಣ್ಣವನಾದ ಮಾತ್ರದಿಂದ ಸಾಹಸಿಯಲ್ಲವೇ? ನಿನ್ನೊಪ್ಪಿಗೆಯು ಸಿಕ್ಕರೆ ಸಾಕು. ನಿನ್ನ ಆಶೀರ್ವಾದ ಒಂದಿದ್ದರೆ ನನ್ನ ಬಯಕೆಯಲ್ಲಾ ಕೈಗೂಡಿಯೇ ಕೂಡುವುದು.

**ರಾಧೆ** – ನೀನು ಕಣ್ಮರೆಯಾದರೇ ನನ್ನ ಜೀವವು ತಲ್ಲಣಿಸುವುದು. ನಿನ್ನನ್ನಗಲಿ ನಾನು ಹೇಗೆ ಸುಖದಿಂದಿರಲಿ?

**ಕರ್ಣ-** ನನ್ನ ಕಲ್ಯಾಣದ ಮೇಲೆ ಕಣ್ಣಿಟ್ಟು, ನೀನು ನನ್ನನ್ನು ಕಳುಹಿಸಲಾರೆಯಾ, ಅಮ್ಮಾ?

**ರಾಧೆ** – *(ಕಂಬನಿತುಂಬಿ)* ಮಗೂ ನೀನಾರ ಬಳಿಗೆ ಹೋಗುವೆ? ನಿನಗೆ ಯಾರ ಪರಿಚಯವಿದೆ.

**ಕರ್ಣ** – ನನಗೊಬ್ಬ ಮಹಾಪುರುಷನ ಗುರುತಿದೆ.

**ರಾಧೆ** – ಯಾರು?

**ಕರ್ಣ** – ಕೆಲವು ದಿನಗಳ ಹಿಂದೆ ನಾನು ಹಳ್ಳಿಯಾಚೆಯ ತೊರೆಯ ಬಳಿ ಕುಳಿತು ನೀರಿ ನಲ್ಲಾಡುವ ಮೀನುಗಳನ್ನು ನೋಡುತ್ತಾ ಇದ್ದೆ. ಆಗ ಒಬ್ಬ ಮಹರ್ಷಿಯು ತನ್ನ ಶಿಷ್ಯರೊಂದಿಗೆ ಅಲ್ಲಿಗೆ ಬಂದನು. ನನ್ನನ್ನು ನೋಡಿ ಬಳಿಗೆ ಬಂದು ಮಾತಾಡಿಸಿದನು.

**ರಾಧೆ** – ಏನೆಂದು?

**ಕರ್ಣ** – ನನ್ನ ಊರು, ಜಾತಿ, ತಂದೆತಾಯಿಗಳು ಇವುಗಳ ವಿಚಾರವನ್ನೆಲ್ಲಾ ಕೇಳಿದನು. ಎಲ್ಲವನ್ನೂ ಹೇಳಿದೆನು. ಕಡೆಗೆ ಆತನು "ಬಾಲಕನೆ, ನಿನ್ನ ಮುಖಕಾಂತಿ ಮಹಾ ವೀರಪುರುಷನನ್ನು ಸೂಚಿಸುತ್ತದೆ" ಎಂದು ಹೇಳಿ ನನ್ನ ಜೀವನದ ಅಲ್ಪಸಂಪೂರ್ಣತೆರೆಯಲ್ಲಿ ಅತೃಪ್ತಿ ಎಂಬ ವಿಲಯಾಗ್ನಿಯ ಕಿಡಿಯನ್ನಿಟ್ಟು ಶಿಷ್ಯರೊಡನೆ ಮರಗಳ ಮರೆಯಲ್ಲಿ ಮರೆಯಾದನು. ಅಂದಿನಿಂದ ನನ್ನ ಜೀವನದ ದೃಷ್ಟಿಯೆ ಬೇರೆಯಾಗಿ ಹೋಗಿದೆ. ಎಲ್ಲಿ ಕುಳಿತರೂ ಆ ಮಹಾಪುರುಷನ ಚಿತ್ರವೇ ಕಾಣುವುದು. ನಿದ್ದೆಯಲ್ಲಿಯೂ ಅವನ ರೂಪವೇ ಆಗಾಗ್ಗೆ ಮೈದೋರಿ ನನ್ನನ್ನು ಕರೆಯುವುದು. ನಾನು ಆತನಲ್ಲಿಗೆ ಹೋದರೆ ನನ್ನನ್ನು ಪ್ರೇಮದಿಂದ ಸ್ವೀಕರಿಸುವನೆಂದು ನನ್ನ ನಂಬಿಕೆ.

**ರಾಧೆ** – ಕಂದ, ನಿನ್ನ ಬಯಕೆಯ ಹೊಳೆಯನ್ನು ನಾನು ಬತ್ತಿಸುವುದಿಲ್ಲ. ನಿನ್ನಿಷ್ಟದಂತೆ ನಡೆಯಲು ನಿನಗೆ ನೆರವಾಗುವೆ. ನಿನ್ನ ತಂದೆಯ ಆಶೀರ್ವಾದವನ್ನು ಪಡೆದು ನೀನು ಶೀಘ್ರದಲ್ಲಿಯೆ ಹರಡಬಹುದು.

**ಕರ್ಣ** – *(ಒಂದು ಕಡೆಗೆ ನೋಡಿ)* ಅಮ್ಮಾ ನೋಡಲ್ಲಿ! ನಮ್ಮ ತಂದೆ ಇತ್ತಲಾಗಿಯೆ ಬರುತ್ತಿರುವನು.
*(ರಾಧೆಯೂ ಕರ್ಣನೂ ಎದ್ದುನಿಲ್ಲುವರು. ಸೂತನು ಬಲೆಯನ್ನು ಹೆಗಲ ಮೇಲಿಟ್ಟುಕೊಂಡು ಒಂದು ಕೈಯಲ್ಲಿ ಒಂದು ಮಹಾ ಧನುಸ್ಸನ್ನೂ ಮತ್ತೊಂದರಲ್ಲಿ ಬಾಣಗಳಿಂದ ತುಂಬಿದ ನಿಷಂಗನನ್ನೂ ಹಿಡಿದುಕೊಂಡು ಪ್ರವೇಶಿಸುವನು. ತಾಯಿಯು ದೂರನಿಲ್ಲುವಳು. ಕರ್ಣನು ಅವನಿಗೆ ಅಡ್ಡಬೀಳುವನು. ಸೂತನು ಉಸ್ಸೆಂದು ತನ್ನ ಹೊರೆಗಳನ್ನು ಕೆಳಗೆ ಹಾಕುವನು)*

**ಕರ್ಣ** – ಅಪ್ಪಾ, ಬಹಳ ಆಯಾಸ ಪಟ್ಟಿದ್ದೀಯ! ಬಾ, ಇಲ್ಲಿ ಕೂತುಕೊಂಡು ಸ್ವಲ್ಪ ವಿಶ್ರಮಿಸಿಕೊ. *(ಸೂತನು ಕುಳಿತುಕೊಳ್ಳುವನು.)*

**ಸೂತ** – ಅಯ್ಯೋ ಆ ಬಿಲ್ಲು ಬತ್ತಳಿಕೆಗಳನ್ನು ಹೊತ್ತು ನನಗೆ ಸಾಕಾಯಿತು.

**ರಾಧೆ** – ಬಿಲ್ಲು ಬತ್ತಳಿಕೆಗಳನ್ನು ಏಕೆ ತಂದಿರಿ? ಯಾರು ಕೊಟ್ಟರು?

**ಸೂತ** – ಇನ್ಯಾರು ಕೊಡಬೇಕು? ಗಂಗಮ್ಮ ಬಲೆಹಾಕಿ ಎಳೆಯಲು ಈ ಬಿಲ್ಲು ಬತ್ತಳಿಕೆ ಬಂದುವು. ಬಹಳ ಪ್ರಯಾಸದಿಂದ ಹೊತ್ತುಕೊಂಡು ಬಂದೆ.

**ಕರ್ಣ** – ಅಪ್ಪಾ, ಅವುಗಳನ್ನು ನಾನು ತೆಗೆದುಕೊಳ್ಳುತ್ತೇನೆ.

**ಸೂತ** – ಅಯ್ಯೋ ಮಗೂ, ನಿನಗೇನು ಮರುಳೇ? ನಾನೇ ತಿಣಿಕಿ ತಿಣಿಕಿ ಎತ್ತಿಕೊಂಡು ಬಂದೆ. ನೀನೆತ್ತ ಬಲ್ಲೆಯಾ?

**ಕರ್ಣ** – ಹಾಗಾದರೆ ನೋಡುವೆನು.
*(ಕರ್ಣನು ಹೋಗಿ ಬಿಲ್ಲು ಬತ್ತಳಿಕೆಗಳನ್ನು ನಿರಾಯಾಸವಾಗಿ ಎತ್ತಿಕೊಂಡು, ಬತ್ತಳಿಕೆಯನ್ನು ಭುಜದ ಮೇಲೆ ಸಿಕ್ಕಿಸಿ ಕೊಂಡು ಯೋಧನಂತೆ ನಿಲ್ಲುವನು.)*
ಏನಪ್ಪಾ? ಹಗುರವಾಗಿದೆಯಲ್ಲಾ!

**ಸೂತ** – *(ಬೆರಗಾಗಿ)*
ಇದೇನಿದು? ಮಗುವು ಎತ್ತಬಲ್ಲ ಬಿಲ್ಲು ನನಗೇಕೆ ಭಾರವಾಯಿತು. ಆ ಬಿಲ್ಲನ್ನು ಇಲ್ಲಿ ಕೊಡು ನೋಡೋಣ. *(ಕರ್ಣನು ಬಿಲ್ಲನ್ನು ಕೊಡುವನು. ಸೂತನು ಅದನ್ನು ಎತ್ತಲಾರದೆ ಕೆಳಕ್ಕೆ ಹಾಕಿ)* ಅಯ್ಯೊ ಇದೇನು? ಮೊದಲಿಗಿಂತಲೂ ಬ್ರಹ್ಮಾಂಡ ಭಾರವಾಗಿದೆಯಲ್ಲಾ. ಮಗೂ, ನಿಜವಾಗಿಯೂ ನಿನಗೆ ಭಾರವಿಲ್ಲವೆ?

**ಕರ್ಣ** – ನಿಜವಾಗಿಯೂ ಭಾರವಿಲ್ಲವಪ್ಪಾ. ನೋಡು *(ಪುನಃ ಎತ್ತಿಕೊಳ್ಳುವನು)*

**ಸೂತ** – ಮಗೂ, ನನಗೆ ಬಗೆ ಹರಿಯುವುದಿಲ್ಲ. ನಿನ್ನೀ ಶಕ್ತಿಯು ಅತಿಮಾನುಷವಾಗಿದೆ.

**ಕರ್ಣ** – ಅಪ್ಪಾ, ನಾನೊಂದು ಬಾಣವನ್ನು ಹೂಡಿ ಹೊಡೆದು ನೋಡಲೆ!

**ರಾಧೆ** – ಅಯ್ಯೋ, ಬೇಡ, ಮಗೂ. ಬಿಲ್ಲುಗಾರಿಕೆ ನಿನಗೆ ತಿಳಿಯದು. ಏನಾದರೂ ಅಪಾಯವಾದೀತು.

**ಕರ್ಣ** – ನಿನಗೇಕಮ್ಮಾ ಹೆದರಿಕೆ?
*(ರಾಧೆಯೂ ಸೂತನೂ ಒಬ್ಬರನ್ನೊಬ್ಬರು ನೋಡುವರು. ಕರ್ಣನು ಬಿಲ್ಲಿಗೆ ಅಂಬನ್ನು ಹೂಡಿ ಸೇದಿ ಎಳೆಯುವನು.)*

**ಸೂತ** – ಸಾಕು! ಸಾಕು, ಮಗೂ ಹೆಚ್ಚು ಏಳೆಯಬೇಡ!
*(ಕರ್ಣನು ಕಿವಿಯವರೆಗೂ ಎಳೆದು ಒಂದು ಬಾಣವನ್ನು ಬಿಡುತ್ತಾನೆ.)*

**ರಾಧೆ** – ಅಯ್ಯೊ, ಅಲ್ಲಿ ನೋಡಿ! ಆ ಮರದ ದೊಡ್ಡ ಕೊಂಬೆ ಮುರಿದು ಬಿತ್ತು.

**ಸೂತ** – *(ಸಂತೋಷದಿಂದ ಕರ್ಣನನ್ನು ಅಪ್ಪಿಕೊಂಡು)* ಕಂದಾ, ನೀನೆನ್ನ ಜೀವನದ ರತ್ನ!

**ರಾಧೆ** – ಅವನು ಬಿಲ್ಲು ವಿದ್ಯೆ ಕಲಿಯಲು ಹೋಗುತ್ತಾನಂತೆ.

**ಸೂತ** – ಅದಕ್ಕೆ ನನ್ನ ತಡೆಯೇನು? ಅವನು ಕಲಿಯದಿದ್ದರೆ ಇನ್ಯಾರು ಕಲಿಯುವರು?

**ಕರ್ಣ** – *(ಸಂತೋಷದಿಂದ)*
ಅಪ್ಪಾ, ಈ ಬಿಲ್ಲು ಬತ್ತಳಿಕೆಗಳನ್ನೂ ತೆಗೆದುಕೊಂಡು ನಾಳೆಯೇ ಹರಡುವೆನು.

**ಸೂತ** – ಆಗಲಿ ಮಗೂ. ಮನೆಗೆ ಹೋಗಿ ಎಲ್ಲವನ್ನೂ ಆಲೋಚಿಸೋಣ.

*(ಎಲ್ಲರೂ ಹೊರಡುವರು)*

*(ಪರದೆ ಬೀಳುವುದು.)*

## ದೃಶ್ಯ - ೩

*(ಒಂದು ಅರಣ್ಯ. ಮೂವರು ಬ್ರಹ್ಮಚಾರಿಗಳು ಪ್ರವೇಶ.)*

**೧ನೇ ಬ್ರಹ್ಮಚಾರಿ** – ತರುಣಾರುಣ ಕಿರಣಗಳಿಂದ ನಲಿಯುತ್ತಿರುವ ಈ ಅರಣ್ಯವು ಎಷ್ಟು ಮನೋಹರವಾಗಿದೆ! ನಾನ ಬಣ್ಣಗಳಿಂದ ಮೆರೆಯುತ್ತಿರುವ ವಿಹಂಗಮಗಳ ನುಣ್ಚರವು ಎಷ್ಟು ಹೃದಯಂಗಮವಾಗಿದೆ. ಈ ಸೌಂದರ್ಯ ಸಾಗದಲ್ಲಿ ಮುಳುಗಿ ತೇಲಾಡುವ ನಾವೆ ಧನ್ಯರು.

**೨ನೇ ಬ್ರಹ್ಮಚಾರಿ** – ಇಂಥಾ ಸನ್ನಿವೇಶವೆ ಪರಮಾತ್ಮನ ಪ್ರತ್ಯಕ್ಷಾನುಭವಕ್ಕೆ ಅತ್ಯಂತ ಸಹಕಾರಿಯಾದುದು.

**೩ನೇ ಬ್ರಹ್ಮಚಾರಿ** – ನಮ್ಮ ಗುರುಗಳು ಹೇಳಲಿಲ್ಲವೆ, ಅದರಿಂದಲೆ ಮಹರ್ಷಿಗಳು ಇಂಥಾ ರಮ್ಯಪ್ರದೇಶಗಳಲ್ಲಿ ವಾಸಮಾಡುವುದು. ಸೌಂದರ್ಯವೆ ಪರಮಾತ್ಮನ ಹೃದಯ!

**೨ನೇ ಬ್ರಹ್ಮಚಾರಿ** – ಉಳಿದ ವಟುಗಳೆಲ್ಲಿ?

**೧ನೇ ಬ್ರಹ್ಮಚಾರಿ** – ಅವರೆಲ್ಲಾ ಗುರುಗಳೊಡನೆ ಬೇರೊಂದು ಕಡೆಗೆ ಹೋದರು. ನಾವಿನ್ನು ಕಾಲಹರಣ ಮಾಡದೆ ಸವಿತ್ರುಪ್ಪಗಳನ್ನು ಆಯೋಣ: ಹೊತ್ತಾದರೆ, ಗೊತ್ತೇ ಇದೆ ಗುರುಗಳ ಕೋಪ.

**೩ನೇ ಬ್ರಹ್ಮಚಾರಿ** – ಹಾಗಾದರೆ ಬನ್ನಿ, ಬೇಗ ಬೇಗ ಆಯೋಣ.

*(ಹೋಗುವರು. ತರಳನಾದ ಕರ್ಣನು ಬಿಲ್ಲು ಬತ್ತಳಿಕೆಗಳಿಂದ ತರುಣ ಯೋಧರಂತೆ ಪ್ರವೇಶಿಸುವನು. ಸುತ್ತಲೂ ನೋಡಿ)*

**ಕರ್ಣ** – ಜಗತ್ತೆಷ್ಟು ವಿಸ್ತಾರವಾಗಿಹುದು! ಇದುವರೆಗೆ
ಬಾವಿಯಲ್ಲಿಹ ಕಪ್ಪೆಯಂತೆ ನಾನಿದ್ದೆ.
ಈ ಮಹಾ ಪರ್ವತಶ್ರೇಣಿಗಳು, ಈ ಮಹಾ
ಅರಣ್ಯಗಳು, ಬಾಂದಳವನಿರಿಯುತಿಹ ಈ ಮಹಾ
ವೃಕ್ಷಗಳು ಇವುಗಳನು ನೋಡಿದರೆ
ನನ್ನೆದೆಯು ವಿಸ್ತಾರವಾಗುವುದು.
ಗುರುಗಳಾಶ್ರಮವೆಲ್ಲಿ?
ಈ ಬನದೊಳೆಲ್ಲೆಲ್ಲಿ ಅರಸಿದರು ತೋರದಿದೆ.
ಸಾಧಿಸಿದ ಹರತೂ ಸಿದ್ಧಿಯಾಗುವುದಿಲ್ಲ
ಎಂದು ತಾಯಿಯು ಹೇಳಿ ಕಳುಹಿಸಿದಳೆನ್ನ! *(ಕೆಳಗೆ ನೋಡಿ)*
ಏನಿದೀ ಪಾದಗಳ ಚಿಹ್ನೆ : ಹನಿಯಿಡಿದ ಈ
ಹಸುರಿನಲಿ ಈಗತಾನೇ ಯಾರೋ ಸಂಚಾರ
ಮಾಡಿಹರು. ಇರಲಿ, ಹುಡಕಿ ನೋಡುವೆನು.
*(ಒಂದೆರಡು ಹೆಜ್ಜೆಗಳನ್ನಿಡುವನು. ಅಷ್ಟರಲಿ ತೆರೆಯಲ್ಲಿ "ಅಯ್ಯೋ! ಹುಲಿ! ಹುಲಿ!" ಎಂದು ಮೂರು ಜನರು ಕೂಗಿಕೊಳ್ಳುವರು. ಕರ್ಣನು ಅನ್ವೇಷಕ ದೃಷ್ಟಿಯಿಂದ ದೂರನೊಡಿ)*

**ಕರ್ಣ** – ಯಾರ ದನಿ : 'ಹುಲಿ' ಎಂದು ಕೂಗುತಿಹರು!
*(ಬ್ರಹ್ಮಚಾರಿಗಳು ಓಡಿಬರುವುದನ್ನು ಕಂಡು, ಹಿಂಬಾಲಿಸುವ ಹುಲಿಯನ್ನು ನೋಡಿ)*
ಹೆದರದಿರಿ! ಹೆದರದಿರಿ!
*(ಎಂದು ಒಂದು ಬಾಣವನ್ನು ಎಳೆದುಬಿಟ್ಟು ಕೂಡಲೆ ಮತ್ತೊಂದು ಬಾಣವನ್ನು ಜೋಡಿಸುವನು. ಬ್ರಹ್ಮಚಾರಿಗಳು ನುಗ್ಗುವರು.)*
ಹೆದರದಿರಿ! ಹೆದರದಿರಿ!
ಹುಲಿ ಸತ್ತಿತ್ತು!

**೧ನೇ ಬ್ರಹ್ಮಚಾರಿ** – ಯಾರಪ್ಪಾ ನೀನು ನಮ್ಮ ಭಾಗದ ಸಂರಕ್ಷಕನು!

**೨ನೇ ಬ್ರಹ್ಮಚಾರಿ** – ಅಯ್ಯೊ ಇನ್ನೇನು ನನ್ನನ್ನು ಹಿಡಿಯುವುದರಲ್ಲಿತ್ತು!

**೩ನೇ ಬ್ರಹ್ಮಚಾರಿ** – ನೀನಾರಪ್ಪಾ? ನಮ್ಮ ಭಾಗದ ದೇವತೆ!

**ಕರ್ಣ** – ಹೆದರದಿರಿ! ಹುಲಿಯಳಿದುದಿನ್ನೇನು ಭಯವಿಲ್ಲ.
ನೋಡಲ್ಲಿ, ನನ್ನ ಬಾಣದ ಪೆಟ್ಟಿನಿಂದುರುಳಿ
ಬಿದ್ದಿಹುದು. ನಿಮ್ಮ ಕೂಗನು ಕೇಳಿ, ನೋಡುತಿರೆ
ಹುಲಿಯನ್ನ ಕಂಗಳಿಗೆ ತೋರಿತು. ಕೂಡಲೇ
ಒಂದು ಶರದಿಂದೆಚ್ಚೆನು.

**೧ನೇ ಬ್ರಹ್ಮಚಾರಿ** – ಅಣ್ಣಾ, ನೀನಾರು!
ಇಲ್ಲಿಗೇತಕೆ ಬಂದೆ? ಯಾವೆಡೆಗೆ ಹೋಗುತಿಹೆ!

**ಕರ್ಣ** – ನೀವಾರು?

**೧ನೇ ಬ್ರಹ್ಮಚಾರಿ** – ನಾವು ಪರುಶುರಾಮ ಮಹರ್ಷಿಗಳ ಶಿಷ್ಯರು. ಸಮಿತ್ಪುಷ್ಪಗಳನ್ನು ಆಯುವುದಕ್ಕಾಗಿ ಅರಣ್ಯಕ್ಕೆ ಬಂದೆವು.

**ಕರ್ಣ** – ಏನು! ಕೊಡಲಿಯೋಜನ ವಟುಗಳೆ?

**೨ನೇ ಬ್ರಹ್ಮಚಾರಿ** – ಹೌದು!

**ಕರ್ಣ** – ಗುರುಗಳೆಲ್ಲಿ?

**೩ನೇ ಬ್ರಹ್ಮಚಾರಿ** – ಅವರೊಡನೆಯೇ ನಾವು ಬಂದೆವು. ಅವರು ಕೆಲವು ಶಿಷ್ಯರೊಡನೆ ಕಾಡಿನ ಬೇರೆಯೆಡೆಗೆ ಹೋದರು. ನಾವು ಈ ಕಡೆಗೆ ಬಂದೆವು.

**ಕರ್ಣ** – ನಾನೂ ನಿಮ್ಮ ಗುರಗಳನ್ನೆ ಹುಡುಕಿಕೊಂಡು ಬಂದೆ. ನನ್ನನು ಅವರೆಡೆಗೆ ಕೊಂಡೊಯ್ಯುವಿರಾ?

**೧ನೇ ಬ್ರಹ್ಮಚಾರಿ** – ನೀನೆಮ್ಮ ರಕ್ಷಕನು, ಸೋದರನು. ನಿನಗೆ ಬೇಕಾದ ಸಹಾಯ ಮಾಡುವೆವು. ಸಂತೋಷದಿಂದ ಗುರುವಿನೆಡೆಗೆ ಕೊಂಡೊಯ್ಯುವೆವು.

**೨ನೇ ಬ್ರಹ್ಮಚಾರಿ** – ಗುರುವಿನೆಡೆ ನಿನಗೇನು ಕಾರ್ಯ?

**ಕರ್ಣ** – ಕಾರ್ಯವಿನ್ನೇನು? ಶಿಷ್ಯನನ್ನಾಗಿ ಸ್ವೀಕರಿಸಿ ಎಂದು ಬೇಡುವುದು!

**೩ನೇ ಬ್ರಹ್ಮಚಾರಿ** – ಏನು, ಶಾಸ್ತ್ರಾಭ್ಯಾಸ ಮಾಡುವುದಕ್ಕೆ?

**ಕರ್ಣ** – ಹೌದು! ಆದರೆ ಶಾಸ್ತ್ರಾಭ್ಯಾಸಕ್ಕಿಂತಲೂ ಶಸ್ತ್ರಾಭ್ಯಾಸದಲ್ಲಿ ನನಗೆ ಅಭಿರುಚಿ ಹೆಚ್ಚು. ಗುರುಗಳು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುವರೇ?

**೧ನೇ ಬ್ರಹ್ಮಚಾರಿ** – ಅದಕ್ಕೇನು? ಸಂತೋಷದಿಂದ ಸ್ವೀಕರಿಸುವರು. ನಿನ್ನಂತಹ ಶಿಷ್ಯರಿರುವುದು ಗುರುಗಳಿಗೆ ಹೆಮ್ಮೆಯಲ್ಲವೆ?

**ಕರ್ಣ** – ಆದರೆ ನಾನು ಬ್ರಾಹ್ಮಣನಲ್ಲ!

**೧ನೇ ಬ್ರಹ್ಮಚಾರಿ** – ಕ್ಷತ್ರಿಯರನ್ನು ಕೂಡ ಅವರು ಶಿಷ್ಯರನ್ನಾಗಿ ಸ್ವೀಕರಿಸುವರು. ಹಿಂದೆ ಭೀಷ್ಮರಿಗೆ ಚಾಪಾಗಮವನ್ನು ಬೋಧಿಸಿರುವರು.

**ಕರ್ಣ** – ಆದರೆ ನಾನು ಕ್ಷತ್ರಿಯನೂ ಅಲ್ಲ!

**೧ನೇ ಬ್ರಹ್ಮಚಾರಿ** – ಹಾಗಾದರೆ ಇನ್ನಾವ ಜಾತಿ?

**ಕರ್ಣ** – ನಾನು ಬೆಸ್ತರ ಕುಲದವನು!

**೩ನೇ ಬ್ರಹ್ಮಚಾರಿ** – ಏನು? ಬೆಸ್ತರ ಕುಲದವನೆ? *(ದೂರ ಸರಿದು ನಿಲ್ಲುವನು)*

**೨ನೇ ಬ್ರಹ್ಮಚಾರಿ** – ನೀನು ಬೆಸ್ತರವನಂತೆ ತೋರುವುದಿಲ್ಲವಲ್ಲಾ!

**ಕರ್ಣ** – ಆದರೂ ನಾನು ಬೆಸ್ತರ ಕುಲದವನೆ?

**೧ನೇ ಬ್ರಹ್ಮಚಾರಿ** – ಚಿಂತೆಯೇಕೆ ಕುಲವು ಜನನದೊಳಿಲ್ಲ; ಗುಣದೊಳಿಹುದು; ಎಂದು ಗುರುಗಳು ಅನೇಕಸಾರಿ ಹೇಳಿರುವರು. ನಿನ್ನ ಪುಣ್ಯದಿಂದ ಶಿಷ್ಯವೃತ್ತಿ ಲಭಿಸಬಹುದು, ಪ್ರಯತ್ನಿಸಿ ನೋಡೋಣ!
*(ಪರಶುರಾಮನು ತನ್ನ ಇಬ್ಬರು ವಟುಗಳೊಡನೆ ಬರುವನು. ಶಿಷ್ಯರು ದೂರ ಸರಿದು ವಿನಯದಿಂದ ನಿಲ್ಲುವರು ಕರ್ಣನು ಸಾಷ್ಟಾಂಗ ನಮಸ್ಕಾರ ಮಾಡುವರು.)*

**ಪರುಶುರಾಮ** – "ಹುಲಿ! ಹುಲಿ!" ಎಂದು ಕೂಗಿದವರು ಯಾರು?

**೧ನೇ ಬ್ರಹ್ಮಚಾರಿ** – ಗುರುವರ್ಯ, ಕೂಗಿದವರು ನಾವೆ! ಒಂದ ದುಷ್ಟ ವ್ಯಾಘ್ರವು ನಮ್ಮನ್ನು ಅಟ್ಟಿಸಿಕೊಂಡು ಬಂದು ಇನ್ನೇನು ಹಿಡಿದು ತಿನ್ನುವುದರಲ್ಲಿತ್ತು. ಅಷ್ಟರಲ್ಲಿ ಈತನು *(ಕರ್ಣನನ್ನು ತೋರಿಸಿ)* ತನ್ನ ಬಾಣದಿಂದ ಅದನ್ನು ಕೊಂದನು.
*(ಪರಶುರಾಮನು ಕರ್ಣನನ್ನು ನೋಡಿ ಮುಗುಳು ನಗೆಯಿಂದ)*

**ಪರಶುರಾಮ** – ನಿನ್ನನ್ನು ನಾನೆಲ್ಲಿಯೋ ನೋಡಿದಂತಿದೆ!

**ಕರ್ಣ** – ಹೌದು, ಗುರುದೇವ! ಕೆಲವು ದಿನಗಳ ಹಿಂದೆ ನಮ್ಮ ಹಳ್ಳಿಯ ಬಳಿಯ ತೊರೆಯೆಡೆಯಲ್ಲಿ ನಾನು ಕುಳಿತಾಗ ಅಲ್ಲಿಗೆ ಬಂದ ತಾವು ನನ್ನನ್ನು ಮಾತಾಡಿಸಿ ಪಾವನನನ್ನಾಗಿ ಮಾಡಿದಿರಿ.
*(ಪರಶುರಾಮನು ಯೋಚಿಸಿ)*

**ಪರಶುರಾಮ** – ನೀನು ಇಲ್ಲಿಗೇತಕೆ ಬಂದೆ?

**ಕರ್ಣ** – ತಮ್ಮ ಬಳಿ ಶಿಷ್ಯವೃತ್ತಿಯನ್ನವಲಂಬಿಸಿ ಶಸ್ತ್ರಾಭ್ಯಾಸ ಮಾಡಬೇಕೆಂದು ಬಂದೆ. ನನ್ನನ್ನು ಅನುಗ್ರಿಸಬೇಕು. *(ಕೈ ಮುಗಿಯುವನು.)*

**೨ನೇ ಬ್ರಹ್ಮಚಾರಿ** – ಗುರುದೇವ, ಇವನು ಬೆಸ್ತರವನಂತೆ!

**ಪರಶುರಾಮ** – *(ಕರ್ಣನನ್ನು ಅಪಾದಮಸ್ತಕಪರ್ಯಂತ ನೋಡಿ)*
ಹೌದು, ಅರಿಗಳ ರುಂಡಗಳೆಂಬ ಮತ್ಸ್ಯಗಳನನ್ನು ತನ್ನ ಶರಜಾಲದಲ್ಲಿ ಹಿಡಿಯುವ ಬೆಸ್ತನು! ಬಾಲಕನೆ, ನಿನ್ನ ಹೆಸರೇನು?

**ಕರ್ಣ** – ರಾಧೇಯ.

**ಪರಶುರಾಮ** – ವಟುಗಳಿರಾ, ಯಾವಾತನ ಮೊಗದಲ್ಲಿ ತೇಜಸ್ಸು
ತೋರುವುದೊ, ಯಾವನೊಳು ಬಾಂದಳದ ಗಾಂಭೀರ್ಯ
ಮೆರೆಯುವುದೊ, ಯಾವನು ಸದಾ ಸತ್ಯವಾಡುವನೂ,
ಅವನೆಲ್ಲಿಯೆ ಇರಲಿ, ಅವನಾರೆ ಆಗಿರಲಿ,
ಬ್ರಾಹ್ಮಣನು! ಎಲ್ಲಿ ಔದಾರ್ಯವಿರುವುದೊ?
ಎಲ್ಲಿ ಸಾಮರ್ಥ್ಯ ಮೈದೋರುವುದೊ? ಮೇಣೆಲ್ಲಿ
ವೀರರಸ ಉಕ್ಕುವುದೊ ಅವರೆಲ್ಲ ಕ್ಷತ್ರಿಯರು.
ರಾಧೇಯ, ನಿನ್ನ ಸಾಮರ್ಥ್ಯಕ್ಕೆ ಮೆಚ್ಚಿದೆನು.
ನಾನರಿತ ವಿದ್ಯೆನು ನಿನಗೆ ಸಂತಸದಿಂದ
ಬೋಧಿಸುವೆ. ಸಂಪ್ರದಾಯವು ಯೋಗ್ಯತೆಯ ಮುಂದೆ
ಬಹುಕಾಲ ನಿಲ್ಲಲರಿಯದು. ಒಳಗಿಹ ಬೆಳಕು
ಹೊಳೆಯತೊಡಗಿದರೆ ಹೊರಗಿರುವ ಕತ್ತಲೆಯು
ತಡೆಯಲಾರದು ಅದನು. ನಿನ್ನ ಕಣ್ಣಿನ ಬೆಳಕೆ
ನಿನ್ನ ಕುಲವನು ಬಿಚ್ಚಿ ಹೇಳುತಿದೆ. ಮುಂದೆಂದೂ
ರಾಧೇಯನೆಂಬುವನು ಪರಶುರಾಮನ ಶಿಷ್ಯ!

*(ಪರದೆ ಬೀಳುವುದು.)*

**ವಿಧಿವಾಣಿ**

ಜನಿಸಿದರು ಕೌರವರು ಅಂಧನೃಪತಿಯ ಸತಿಯ
ಗಾಂಧಾರಿಯುದರಲಿ. ಕುಂತಿದೇವಿಯು ಪಡೆದ
ಐದುಮಂತ್ರಂಗಳಲಿ ಕಳೆದುಳಿದ ನಾಲ್ಕರಲಿ
ಮೊದಲನೆಯ ಮೂರರಲಿ ಯಮಸೂನು, ಕಲಿಭೀಮ,
ಕಲಿಪಾರ್ಥರೆಂಬುವರು, ಕಡೆಯ ಮಂತ್ರದಲಿ
ಮಾದ್ರಿಯ ಬಸಿರಿನಲ್ಲಿ ಮೂಡಿದರು ನಕುಲ
ಸಹದೇವರೆಂಬುವರು ಪಂಚಪಾಂಡವರು.
ನಂದಗೋಕುಲದಲ್ಲಿ ದೂರ್ತ ಕಂಸನ ಕೈಗೆ
ಸಿಕ್ಕದಲೆ ವಸುದೇವ ದೇವಕಿಯ ಗರ್ಭದಲಿ
ಬಂದು, ಗೊಪರ ಕೂಡಿ ಬೆಳೆಯುತಿಹನಾಟದಲಿ
ಶ್ರೀ ಕೃಷ್ಣ ಪರಮಾತ್ಮ. ಮುನಿಶಾಪದಿಂದಳಿಯೆ
ಪಾಂಡುಭೂಪತಿಯು ಮುನಿಗಳವರ್ಯೆವರನು,
ಕುಂತಿಯನು, ಭೀಷ್ಮರಲ್ಲಿಗೆ ಕಳುಹಿ ತೆರಳಿದರು.
ತರುವಾಯ ಪಾಂಡವರು ಕೌರವರು ಜೊತೆಯಾಗಿ
ಲೀಲೆಯಲಿ ಬಳೆಯುತಿರೆ ಭೀಮ ದುರ್ಯೋಧನರ
ಮುನಿಸಿನಾ ತಾಮಸಿಕೆ ಮಿಗಿಲಾಯ್ತು. ಪಾಂಡವರು
ಕೌರವರು ಚಾಪಾಗಮಚಾರ್ಯ ದ್ರೋಣನಲಿ
ಶಸ್ತ್ರಶಾಸ್ತ್ರಾಭ್ಯಾಸವನು ಮಾಡುತಿಹರೀಗ.
ಕುಂತಿದೇವಿಯ ಹಿರಿಯಮಗನಾದ ಕರ್ಣನು
ರಾಧೇಯನಾಗಿ ಪರುಶುರಾಮರ ಕೂಡಿ
ಬಿಲ್ವಿದ್ಯೆನು ಕಲಿಯುತಿಹನು. ನೋಡಲ್ಲಿ;
ಮುನಿವರ ಎಲೆವನೆಯ ಬಳಿಯ ಹೊರಬಯಲಿನಲಿ
ತಾಯಿ ಗಂಗೆಯು ಕೊಟ್ಟ ಬಿಲ್ಲನೆಂತೆತ್ತುವನು! ami8

�Uug@��yನಗೇಕಮ್ಮಾ ಹೆದರಿಕೆ?

*(ರಾಧೆಯೂ ಸೂತನೂ ಒಬ್ಬರನ್ನೊಬ್ಬರು ನೋಡುವರು. ಕರ್ಣನು ಬಿಲ್ಲಿಗೆ ಅಂಬನ್ನು ಹೂಡಿ ಸೇದಿ ಎಳೆಯುವನು.)*

**ಸೂತ** – ಸಾಕು! ಸಾಕು, ಮಗೂ ಹೆಚ್ಚು ಏಳೆಯಬೇಡ!

*(ಕರ್ಣನು ಕಿವಿಯವರೆಗೂ ಎಳೆದು ಒಂದು ಬಾಣವನ್ನು ಬಿಡುತ್ತಾನೆ.)*

**ರಾಧೆ** – ಅಯ್ಯೋ, ಅಲ್ಲಿ ನೋಡಿ! ಆ ಮರದ ದೊಡ್ಡ ಕೊಂಬೆ ಮುರಿದು ಬಿತ್ತು.

**ಸೂತ** – *(ಸಂತೋಷದಿಂದ ಕರ್ಣನನ್ನು ಅಪ್ಪಿಕೊಂಡು)* ಕಂದಾ, ನೀನೆನ್ನ ಜೀವನದ ರತ್ನ!

**ರಾಧೆ** – ಅವನು ಬಿಲ್ಲು ವಿದ್ಯೆ ಕಲಿಯಲು ಹೋಗುತ್ತಾನಂತೆ.

**ಸೂತ** – ಅದಕ್ಕೆ ನನ್ನ ತಡೆಯೇನು? ಅವನು ಕಲಿಯದಿದ್ದರೆ ಇನ್ನಾರು ಕಲಿಯುವರು?

**ಕರ್ಣ** – *(ಸಂತೋಷದಿಂದ)*

ಅಪ್ಪಾ, ಈ ಬಿಲ್ಲು ಬತ್ತಳಿಕೆಗಳನ್ನೂ ತೆಗೆದುಕೊಂಡು ನಾಳೆಯೇ ಹರಡುವೆನು.

**ಸೂತ** – ಆಗಲಿ ಮಗೂ. ಮನೆಗೆ ಹೋಗಿ ಎಲ್ಲವನ್ನೂ ಆಲೋಚಿಸೋಣ.

*(ಎಲ್ಲರೂ ಹೊರಡುವರು)*

*(ಪರದೆ ಬೀಳುವುದು.)*

## ದೃಶ್ಯ - ೪

*(ಪರಶುರಾಮನ ಪರ್ಣಶಾಲೆಯ ಹೊರಭಾಗ. ಕರ್ಣನು ಧನಸ್ಸನ್ನು ಎತ್ತತ್ತಿರುವನು)*

**ಕರ್ಣ** – ನಿನ್ನೆ ಗುರುಗಳು ಬೋಧಿಸಿದ ಮಾರ್ಗ ಬಲುಸೊಗಸು!
ಇಂದು ಗುರುಗಳು ಬರುವ ಮುನ್ನವೇ ಕಲಿತದನು
ತೋರಿಸುವೆ. ಗುರಿಯ ಗುರುತೆಲ್ಲಿ? ಎಳೆಬಿಸಿಲ
ಕಾಂತಿಯಲಿ ಕಾಣಿಸುವುದೇ ಇಲ್ಲ.
*(ದೂರನೊಡಿ)* ಅಲ್ಲಿಹುದು!

*(ಒಂದು ಬಾಣವನ್ನು ಜೋಡಿಸಿ ಹೊಡೆದು ಪುನಃ ಗುರುತನ್ನು ನೋಡಿ)*
ಗುರಿಯು ಸರಿಯಾಯ್ತೊ ಇಲ್ಲವೊ ನೋಡುವೆನು.
*(ಓಡುವನು. ಇಬ್ಬರು ವಟುಗಳು ಬರುವರು.)*

**೧ನೇ ಬ್ರಹ್ಮಚಾರಿ** – ಏನಪ್ಪಾ ಅವನ ಉತ್ಸಾಹ! ಕನಸಿನಲ್ಲಿಯೂ ಕೂಡ ಅವನಿಗೆ ವಿಲ್ವಿದ್ಯೆಯ ಹಂಬಲು!

**೨ನೇ ಬ್ರಹ್ಮಚಾರಿ** – ನಿನ್ನೆ ರಾತ್ರಿ ಮಲಗಿದ್ದಾಗ ಯುದ್ಧರಂಗದಲ್ಲಿ ಕೂಗುವವರಂತೆ ಕೂಗಿದನು. ನನಗೆ ಗಾಬರಿಯಾಗಿ ತಟ್ಟಿ ಎಬ್ಬಿಸಿದೆ. ಎಂತಹ ಕಷ್ಟಸಾಧ್ಯವಾದ ಕೈಚಳಕಗಳನ್ನು ಎಷ್ಟು ಬೇಗ ಕಲಿತುಬಿಟ್ಟ!

**೧ನೇ ಬ್ರಹ್ಮಚಾರಿ** – ಅವನು ಅನನ್ಯಸಾಮಾನ್ಯನಪ್ಪಾ!
*(ಕರ್ಣನು ಬಾಣದೊಡನೆ ಓಡಿಬರುವನು)*

**೨ನೇ ಬ್ರಹ್ಮಚಾರಿ** – ರಾಧೇಯ, ಇದೇನು ಅವಸರ?

**ಕರ್ಣ** – ಸರಿಯಾಗಿ ಗುರಿಯು ಬಿತ್ತೋ ಇಲ್ಲವೋ ಎಂದು ನೋಡಲು ಹೋಗಿದ್ದೆ. ಬಾಣದಿಂದ ಮುಚ್ಚಿಕೊಂಡ ಗುರಿಯ ಚಿಹ್ನೆಯೇ ಕಾಣಲಿಲ್ಲ!

**೧ನೇ ಬ್ರಹ್ಮಚಾರಿ** – ನಿನ್ನೆ ಗುರುಗಳು ಹೇಳಿಕೊಟ್ಟ ಮಾರ್ಗ ಚೆನ್ನಾಗಿ ಗೊತ್ತಾಯಿತೋ?

**ಕರ್ಣ** – ಅದನ್ನೇ ಅಭ್ಯಾಸಮಾಡುತ್ತಿದ್ದೇನೆ!

**೨ನೇ ಬ್ರಹ್ಮಚಾರಿ** – ಎಲ್ಲಿ? ನೋಡೋಣ ಇನ್ನೊಂದು ಸಾರಿ!

**೧ನೇ ಬ್ರಹ್ಮಚಾರಿ** – ಈ ಸಾರಿ ಬೇರೆಗುರಿ. ನೋಡು, ದೂರದ ಆ ಮರದ ನೆತ್ತಿಯಲ್ಲಿ ಕೆಂಪಾಗಿ ರಂಜಿಸುವ ಹೂವನ್ನು ಕತ್ತರಿಸಬೇಕು.

**ಕರ್ಣ** – ಅಯ್ಯೋ, ಹೂವನ್ನು ಕತ್ತರಿಸುವುದೊಂದು ವೀರತ್ವವೇ?

**೧ನೇ ಬ್ರಹ್ಮಚಾರಿ** – ಹಾಗಲ್ಲ, ಹಾಗಲ್ಲ; ನಿನ್ನ ಚಾತುರ್ಯದ ಪರೀಕ್ಷೆಯಾಗುವುದು.

**ಕರ್ಣ** – ಆಗಲಿ, ಅದಕ್ಕೇನು.
*(ಒಂದು ಬಾಣವನ್ನು ಸಿಂಜಿನಿಗೆ ಸೇರಿಸಿ ಗುರಿಯಿಟ್ಟು ನಿಲ್ಲುವನು. ಪರಶುರಾಮನು ದೂರ ಬಂದು ನಿಂತು ನೋಡುವನು.)*

**೧ನೇ ಬ್ರಹ್ಮಚಾರಿ** – ಹೂವು ಸ್ವಲ್ಪವೂ ಹಾಳಾಗಬಾರದು. ಹಾಗೆ ಕತ್ತರಿಸಬೇಕು!
*(ಕರ್ಣನು ಬಾಣಪ್ರಯೋಗ ಮಾಡುವನು)*

**೨ನೇ ಬ್ರಹ್ಮಚಾರಿ** – ಭಲಾ! ಭಲಾ! ಹೂ ಬಿದ್ದೇಬಿಟ್ಟಿತು. *(ಓಡುವನು.)*

**೧ನೇ ಬ್ರಹ್ಮಚಾರಿ** – ರಾಧೇಯ, ಇದೇನು ನಿನ್ನ ಕರಚಾತುರ್ಯ! ಅನುಪಮವಾಗಿದೆ.

**ಕರ್ಣ** – ಗುರುಗಳ ಕೃಪೆಯೊಂದು ಇದ್ದರೆ ಅಸಾಧ್ಯ ಸಾಧನೆಯಾಗುವುದೇನೊ ಕೌತುಕವಲ್ಲ.
*(೨ನೇ ವಟು ಹೂವನ್ನು ತೆಗೆದುಕೊಂಡು ಪ್ರವೇಶಿಸಿ)*

**೨ನೇ ಬ್ರಹ್ಮಚಾರಿ** – ಹೂವನ್ನು ಕೈಯಿಂದ ಕೊಯ್ದರೂ ಇಷ್ಟು ಸೊಗಸಾಗಿರುವುದಿಲ್ಲ. ನೋಡಿಲ್ಲಿ, ಒಂದು ದಳವು ಕೂಡ ಅಲುಗಾಡಿಲ್ಲ. ತೊಟ್ಟು ಮಾತ್ರ ತುಂಡಾಗಿದೆ.
*(ಎಲ್ಲರೂ ನೋಡಿ ಸಂತೋಷಪಡುವರು.)*

**ಕರ್ಣ** – ಅಷ್ಟೇ ಸಾಲದು. ನಿಮ್ಮಲ್ಲಿ ಯಾರಾದರೂ ಒಂದು ಸಣ್ಣ ಕಲ್ಲನ್ನು ವೇಗವಾಗಿ ಎಸೆಯಿರಿ. ನಾನು ಅದನ್ನು ಮಧ್ಯದಲ್ಲಿಯೆ ಬಾಣದಿಂದ ಹೊಡೆದು ಪುಡಿಮಾಡುವೆನು.

**೧ನೇ ಬ್ರಹ್ಮಚಾರಿ** – ನಿಜವಾಗಿಯೂ!

**ಕರ್ಣ** – ಹೆಚ್ಚು ಮಾತೇಕೆ? ನೀವು ಎಸೆಯಿರಿ!
*(ಬ್ರಹ್ಮಚಾರಿಯು ಒಂದು ಸಣ್ಣಕಲ್ಲನು ಆಯ್ದು ನಿಲ್ಲುವನು. ಕರ್ಣನು ಬಾಣವನ್ನು ಹೂಡಿ ನಿಲ್ಲುವನು. ಬ್ರಹ್ಮಚಾರಿಯು ಕಲ್ಲನ್ನು ಎಸೆಯಲು ಕರ್ಣನು ಬಾಣವನ್ನು ಬಿಡುವನು. ಕಲ್ಲು ಮಧ್ಯಮಾರ್ಗದಲ್ಲಿ ಪುಡಿ ಪುಡಿಯಾಗುವುದು.)*

**೨ನೇ ಬ್ರಹ್ಮಚಾರಿ** – ಹೋ ಕಲ್ಲು ಧೂಳಿಯಾಯಿತು.

**೧ನೇ ಬ್ರಹ್ಮಚಾರಿ** – ಭಾಪು ರಾಧೇಯ! ಭಾಪು! ನಿನಗೆ ಎಣೆಯಾಗುವರು ಮತ್ತಾರು ಇಲ್ಲ.

**ಕರ್ಣ** – ಇದೆಲ್ಲಾ ಚತುರತೆಯ ಕಾರ್ಯವಾಯಿತು. ಇನ್ನು ಶಕ್ತಿಯ ಕಾರ್ಯ! ನೋಡಿ, ಅಲ್ಲಿ ದೂರದಲ್ಲಿ ಎದ್ದಿರುವ ದೊಡ್ಡಬಂಡೆಗೆ ಬಾಣದಿಂದೆಚ್ಚು ಒಡೆಯುವೆನು.

**ಇಬ್ಬರೂ** – ನೋಡೋಣ! ನೋಡೋಣ!
*(ಕರ್ಣನು ಬಾಣದಿಂದೆಚ್ಚು ಬಂಡೆಯನ್ನು ಒಡೆಯುವನು.)*

**೧ನೇ ಬ್ರಹ್ಮಚಾರಿ** – ಬಂಡೆ ಪುಡಿಪುಡಿಯಾಯಿತು.

**೨ನೇ ಬ್ರಹ್ಮಚಾರಿ** – ಅಯ್ಯೋ ಬೆಂಕಿ! ಬೆಂಕಿ!

**ಕರ್ಣ** – ಹೆದರಬೇಡಿ ಜಲಾಸ್ತ್ರದಿಂದ ಅದನ್ನು ಆರಿಸುವೆನು.
*(ಮತ್ತೊಂದು ಬಾಣದಿಂದ ಹೊಡೆಯುವನು. ಪರಶುರಾಮನು ಮುಂದೆ ಬಂದು ಕರ್ಣನ ಬೆನ್ನು ತಟ್ಟಿ)*

**ಪರಶುರಾಮ** – ರಾಧೇಯ, ಇಂದಿಗೆ ನೀನು ಚಾಪಾಗಮ ಕೋವಿದನಾದೆ. ನೀನು ನನ್ನ ಕೀರ್ತಿಗೆ ಕಾಂತಿದಾಯಕನಾಗುವುದರಲ್ಲಿ ಸಂದೇಹವಿಲ್ಲ. ನಿನ್ನ ಭವಿಷ್ಯತ್ತು ಅತ್ಯಂತ ಮಹತ್ತಾದುದಾಗಿದೆ. ಕಲಿಯಬೇಕಾದುದೆಲ್ಲವನ್ನೂ ಕಲಿತಿರುವೆ. ನೀನಿನ್ನೂ ಹೊರ ಹೊರಟು ನಿನ್ನ ಸಾಮರ್ಥ್ಯದಿಂದ, ನಿನ್ನ ಅಲೌಕಿಕ ಪ್ರತಿಭೆಯಿಂದ ಜಗತ್ತನ್ನು ಬೆರಗುಗೊಳಿಸಿ ಕೀರ್ತಿವಂತನಾಗು.

**ಕರ್ಣ** – ಗುರುದೇವ, ಎಂದೆನಗೆ ಅಡವಿಯಲಿ ತಮ್ಮ ತುಳ
ಧರ್ಶನವು ದೊರಕಿತೋ, ಎಂದು ನೀವೀ ಸೂತ
ಪುತ್ರನನು ಶಿಷ್ಯನನ್ನಾಗಿ ಸ್ವೀಕರಿಸಿದಿರೋ,
ಅಂದೆನ್ನ ಪುಣ್ಯತರು ಕುಸುಮಿಸಿತು. ನೀವುಳಿಯೆ
ನಾನೆಲ್ಲಿ? ನಿಮ್ಮ ಕೃಪೆಯಿಂದೆನೆಗೆ ಕೈಸೇರಿತೀ
ಮಹಾ ಬಿಲ್ವಿದ್ಯೆ. ನಾ ನಿಮಗೆ ಚಿರಋಣಿಯು!
ಏನು ಗುರುದಕ್ಷಿಣೆಯ ನೀಡುವೆನೊ ನಾನರಿಯೆ!

**ಪರಶುರಾಮ** – ನನ್ನಿಯನುಗಳಿಯಬೇಡ; ಸಲಹಿದೊಡೆಯಗೆ ಮರಳಿ
ದ್ರೋಹವನೆಣಿಸಬೇಡ; ದೀನರರನು ತುಳಿಯದಿರು;
ಧೂರ್ತರಿಗೆ ಮಣಿಯದಿರು. ಕಾಳೆಗದೊಳಿರುವಾಗ
ಧರ್ಮಯುದ್ಧವನೆಂದೂ ನೀಗದಿರು. ಅರಿಗಳಿಗೆ
ಮೈಸೋತು ಹಿಮ್ಮೆಟ್ಟದಿರು. ಸಿಂಹದೋಲು ಬಾಳು!
ಅದುವೆ ನೀನೆನಗೀವ ಗುರುದಕ್ಷಿಣೆ!

**ಕರ್ಣ** – *(ಮಣಿದು)* ಅಂತೆಗೆಯ್ವೆನು, ದೇವ, ನಿಮ್ಮೊಲ್ಮೆಯೊಂದಿರಲಿ!
*(ಒಬ್ಬ ಬ್ರಹ್ಮಚಾರಿಯು ಓಡಿ ಬಂದು ಗುರುಗಳಿಗೆ ನಮಿಸಿ)*

**ಬ್ರಹ್ಮಚಾರಿ** – ಗುರುವರ್ಯ ಭೀಷ್ಮದೇವನು ತಮ್ಮ ಸಂದರ್ಶನಕ್ಕಾಗಿ ಬಂದಿರುವನು.

**ಪರಶುರಾಮ** – ಆತನನ್ನು ಕರೆದುಕೊಂಡು ಬಾ. *(ಕರ್ಣನಿಗೆ)* ರಾಧೇಯ, ಗಾಂಗೇಯನ ಕೀರ್ತಿಯನ್ನು ಕೇಳಿದ್ದೀಯಾ?

**ಕರ್ಣ** – ಹೌದು, ಗುರುದೇವ, ಸ್ವಲ್ಪ ಕೇಳಿದ್ದೇನೆ.

**ಪರಶುರಾಮ** – ಬ್ರಹ್ಮಚರ್ಯದ ಮೂರ್ತಿ, ಸ್ವಾರ್ಥತ್ಯಾಗದ ಬೀಡು;
ಗಾಂಭೀರ್ಯದಾಗರವು, ಭಕ್ತಿಗೆ ನಲೆವನೆಯು;
ಪೂಣ್ದ ಪೂಣ್ಕೆಯ ಸಾಧಿಸುವರೊಳಗೆ ಅಗ್ಗಳನು.
ಕಲಿಯಾತನ್ ಅಮಿತಬಲಯುತನಾತನ್ ಇರಿವರೊಳು
ಕಟ್ಬಾಳು; ಮಾನನಿಧಿ; ಪಂಡಿತನು; ವರಯೋಗಿ;
ಭೀಷ್ಮನಂತಹ ಮಹಾಪುರಷನನು ಇದುವರೆಗು
ಭೂದೇವಿ ಪಡೆದಿಲ್ಲ. ಕೌರವರು ಪಾಂಡವರಿ-
ಗಾತನು ಪಿತಾಮಹನು. ಅವನೊಡನೆ ನೀನು
ಗಜಪುರಿಗೆ ಹೋದಯಾದೊಡೆ ನಿನಗೆ ಬೇಕಾದ
ಸಂಗ ದೊರೆಕೊಳ್ಳುವುದು. ನನಗವನು ಹಿರಿಯ ಶಿಷ್ಯ.
ನಿನ್ನ ಅದಟನು ತಿಳುಹಿ ಅವನೊಡನೆ ಕಳುಹುವೆನು.
ನಿನ್ನಲ್ಲಿ ನಿನ್ನ ಶೌರ್ಯವ ಮೆರೆದು ಮೇಲೇರು.
*(ಭೀಷ್ಮನು ವಟುವಿನೊಡನೆ ಬಂದು ಗುರುಗಳಿಗೆ ನಮಸ್ಕರಿಸಿ ನಿಲ್ಲುವನು.)*

**ಪರಶುರಾಮ** – ಗಾಂಗೇಯ, ನೀನಿಲ್ಲಿಗೈತಂದಹದನೇನು?

**ಭೀಷ್ಮ** – ಗುರುವರ್ಯ, ಅರಗಜ್ಜದಡವಿಯೊಳು ತಿರುತಿರುಗಿ
ಬೇಸತ್ತ ನಾನು, ಶಾಂತಿಲಾಭಕ್ಕಾಗಿ
ನಿಮ್ಮ ದರ್ಶನಕೆಳಸಿ ಇಲ್ಲಿಗೈತಂದಿಹೆನು;
ಮತ್ತೇನು ಇಲ್ಲ.

**ಪರಶುರಾಮ** – ಸಂತೋಷ. ಗಾಂಗೇಯ,
ಕುಂತೀದೇವಿಗೆ ಸುಖವೆ? ಧೃತರಾಷ್ಟ್ರ, ಗಾಂಧಾರಿ
ಪಾಂಡವರು, ಕೌರವರು ಕ್ಷೇಮವೇ? ಭಕ್ತವರ
ಶ್ರೀವಿದುರನೆಂತಿಹನು?

**ಭೀಷ್ಮ** – ಇದುವರೆಗೆ ಎಲ್ಲರೂ
ಸುಕ್ಷೇಮದಿಂದಿಹರು, ಗುರುದೇವ. ಪಾಂಡವರು
ಕೌರವರು ಚಾಪಾಗಮಾಚಾರ್ಯರಾಗಿರುವ
ಶ್ರೀದ್ರೋಣರಡಿಯಲ್ಲಿ ಶಸ್ತ್ರವಿದ್ಯಯನೀಗ
ಕಲಿಯುತಿಹರು. *(ಕರ್ಣನನ್ನು ನೋಡಿ)*
ಗುರುದೇವ, ಈ ಕ್ಷತ್ರಿಯ ಯುವಕನಾರು? *(ಕರ್ಣನು ತಲೆತಗ್ಗಿಸುವನು.)*

**ಪರಶುರಾಮ** – ಜಾತಿಯಲಿ ಸೂತಜನು;
ಗುಣದಲ್ಲಿ ಕ್ಷತ್ರಿಯನು. ಇವನೆನ್ನ ಶಿಷ್ಯ,
ರಾಧೇಯನೆಂಬುವನು. *(ಕರ್ಣನು ಭೀಷ್ಮರಿಗೆ ವಂದಿಸುವನು)*
ಶಸ್ತ್ರವಿದ್ಯೆಯೊಳೀತನ್
ಅಪ್ರತಿಮನಾಗಿಹನು. ಈತನನು ನೀನು
ಗಜಪುರಿಗೆ ಕೊಂಡೊಯ್ದು ಸಲಹಿದರೆ, ಮುಂದೆ
ನಿಮ್ಮ ರಾಜ್ಯದ ಬಲಕೆ ಬಲದ ಕೈಯಾಗುವನು.

**ಭೀಷ್ಮ** – *(ಸ್ವಗತ)* ಈ ಬಾಲಕನ ಕಂಡು ಇಂತೇಕೆ ನನ್ನೆದೆಯು
ಮೋಹದಲಿ ಸಿಕ್ಕಿಹುದು? ಇವನನ್ನರಮಿತರನು
ಕಂಡೆನಾದರು ಇಂತು ಎದೆ ತಲ್ಲಣಿಸಲಿಲ್ಲ.
*(ಬಹಿರಂಗ)* ಗುರುದೇವ, ತಮ್ಮಾಜ್ಞೆಯಂತೆಯೇ ವರ್ತಿಸುವೆ.
ನನ್ನ ಮೊಮ್ಮಕ್ಕಳೊಡನೀತನೂ ಕೂಡಿರಲಿ.

**ಪರಶುರಾಮ** – ರಾಧೇಯ, ಭೀಷ್ಮನೊಂದಿಗೆ ಹೊರಡಲನುವಾಗು!
*(ಕರ್ಣ ಮೊದಲಾದವರು ಹೋಗುವರು. ಪರಶುರಾಮ ಗಂಭೀರ ಧ್ವನಿಯಿಂದ)*
ಗಾಂಗೇಯ, ಈ ವೀರ ಬಾಲಕನು ಸಾಮಾನ್ಯ-
ನೆಂದರಿಯಬೇಡ. ನೀನೊಂದು ವರ್ಷದಲಿ
ಕಲಿತುದನು ಇವನೊಂದು ತಿಂಗಳಲಿ ಅರಿತಿಹನು.

**ಭೀಷ್ಮ** – ಗುರುದೇವ, ಅವನ ಮುಖಕಾಂತಿಯೇ ಉಸುರವುದು
ಅವನಾತ್ಮವೆನಿತು ಮಹಿಮಾಸ್ಪದವು ಎಂಬುದನು.
ವೀರನರಿಯನೆ ವೀರನಾರೆಂಬುದನು?

**ಪರಶುರಾಮ** – ಹೌದು, ಗಾಂಗೇಯ, ಯಾವ ಚಿಪ್ಪಿನೊಳಾವ
ಮುತ್ತಿರುವುದೆಂಬುದನು ಬಲ್ಲವರೆ ಬಲ್ಲರು!
ಪಂಚಪಾಂಡವರು.
ನಂದಗೋಕುಲದಲ್ಲಿ ದೂರ್ತ ಕಂಸನ ಕೈಗೆ
ಸಿಕ್ಕದಲೆ ವಸುದೇವ ದೇವಕಿಯ ಗರ್ಭದಲಿ
ಬಂದು, ಗೊಪರ ಕೂಡಿ ಬೆಳೆಯುತಿಹನಾಟದಲಿ
ಶ್ರೀ ಕೃಷ್ಣ ಪರಮಾತ್ಮ. ಮುನಿಶಾಪದಿಂದಳಿಯೆ
ಪಾಂಡುಭೂಪತಿಯು ಮುನಿಗಳವರೈವರನು,
ಕುಂತಿಯನು, ಭೀಷ್ಮರಲ್ಲಿಗೆ ಕಳುಹಿ ತೆರಳಿದರು.

ತರುವಾಯ ಪಾಂಡವರು ಕೌರವರು ಜೊತೆಯಾಗಿ
ಲೀಲೆಯಲಿ ಬಳೆಯುತಿರೆ ಭೀಮ ದುರ್ಯೋಧನರ
ಮುನಿಸಿನಾ ತಾಮಸಿಕೆ ಮಿಗಿಲಾಯ್ತು. ಪಾಂಡವರು
ಕೌರವರು ಚಾಪಾಗಮಚಾರ್ಯ ದ್ರೋಣನಲಿ
ಶಸ್ತ್ರಶಾಸ್ತ್ರಾಭ್ಯಾಸವನು ಮಾಡುತಿಹರೀಗ.
ಕುಂತಿದೇವಿಯ ಹಿರಿಯಮಗನಾದ ಕರ್ಣನು
ರಾಧೇಯನಾಗಿ ಪರುಶುರಾಮರ ಕೂಡಿ
ಬಿಲ್ವಿದ್ಯೆನು ಕಲಿಯುತಿಹನು. ನೋಡಲ್ಲಿ;
ಮುನಿವರ ಎಲೆವನೆಯ ಬಳಿಯ ಹೊರಬಯಲಿನಲಿ
ತಾಯಿ ಗಂಗೆಯು ಕೊಟ್ಟ ಬಿಲ್ಲನೆಂತೆತ್ತುವನು!

ನನಗೇಕಮ್ಮಾ ಹೆದರಿಕೆ?
*(ರಾಧೆಯೂ ಸೂತನೂ ಒಬ್ಬರನ್ನೊಬ್ಬರು ನೋಡುವರು. ಕರ್ಣನು ಬಿಲ್ಲಿಗೆ ಅಂಬನ್ನು ಹೂಡಿ ಸೇದಿ ಎಳೆಯುವನು.)*

**ಸೂತ** – ಸಾಕು! ಸಾಕು, ಮಗೂ ಹೆಚ್ಚು ಎಳೆಯಬೇಡ!
*(ಕರ್ಣನು ಕಿವಿಯವರೆಗೂ ಎಳೆದು ಒಂದು ಬಾಣವನ್ನು ಬಿಡುತ್ತಾನೆ.)*

**ರಾಧೆ** – ಅಯ್ಯೋ, ಅಲ್ಲಿ ನೋಡಿ! ಆ ಮರದ ದೊಡ್ಡ ಕೊಂಬೆ ಮುರಿದು ಬಿತ್ತು.

**ಸೂತ** – *(ಸಂತೋಷದಿಂದ ಕರ್ಣನನ್ನು ಅಪ್ಪಿಕೊಂಡು)* ಕಂದಾ, ನೀನೆನ್ನ ಜೀವನದ ರತ್ನ!

**ರಾಧೆ** – ಅವನು ಬಿಲ್ಲು ವಿದ್ಯೆ ಕಲಿಯಲು ಹೋಗುತ್ತಾನಂತೆ.

**ಸೂತ** – ಅದಕ್ಕೆ ನನ್ನ ತಡೆಯೇನು? ಅವನು ಕಲಿಯದಿದ್ದರೆ ಇನ್ಯಾರು ಕಲಿಯುವರು?

**ಕರ್ಣ** – *(ಸಂತೋಷದಿಂದ)*
ಅಪ್ಪಾ, ಈ ಬಿಲ್ಲು ಬತ್ತಳಿಕೆಗಳನ್ನೂ ತೆಗೆದುಕೊಂಡು ನಾಳೆಯೇ ಹರಡುವೆನು.

**ಸೂತ** – ಆಗಲಿ ಮಗೂ. ಮನೆಗೆ ಹೋಗಿ ಎಲ್ಲವನ್ನೂ ಆಲೋಚಿಸೋಣ.

*(ಎಲ್ಲರೂ ಹೊರಡುವರು)*

*(ಪರದೆ ಬೀಳುವುದು.)*

# ಶ್ರೀ ಕೃಷ್ಣ ಮತ್ತು ಕರ್ಣ

*ಇಂದಿಗೆ ನಾಲ್ವತ್ತೈದು ವರ್ಷಗಳು ಹಿಂದೆ ರಚಿತವಾಗಿದ್ದ ಈ ದೃಶ್ಯ ಮಹಾರಾಜಾ ಕಾಲೇಜು ಯೂನಿಯನ್ ಹೊರಡಿಸುತ್ತಿದ್ದ 'ಯೂನಿಯನ್ ಮ್ಯಾಗಜೀನ್'ನಲ್ಲಿ ಅಚ್ಚಾಗಿದ್ದು ಭೂಗತವಾಗಿ ಹೋಗಿತ್ತು. ದಿವಂಗತ ಪ್ರಧಾನ ನ್ಯಾಯದೀಶ ಶ್ರೀ ಹೊಂಬೇಗೌಡರು ಅನೇಕ ವರ್ಷಗಳ ತರುವಾಯ ಶ್ರೀ ರಾಮಾಯಣ ದರ್ಶನಂ ಪ್ರಕಟವಾದ ಕಾಲದಲ್ಲಿ ನನ್ನನ್ನು ಸಂಧಿಸಿದಾಗ ಈ ದೃಶ್ಯದ ಕಡೆ ನನ್ನ ಗಮನ ಸೆಳೆದು ಅದನ್ನು ಬಹಳವಾಗಿ ಹೊಗಳಿದ್ದರು. ಅಲ್ಲದೆ. ಅವರು ವಿದ್ಯಾರ್ಥಿಯಾಗಿದ್ದಾಗ ಬಾಯಿಪಾಠ ಮಾಡಿದ್ದ ಅದರ ಕೆಲಭಾಗಗಳನ್ನು ನೆನಪಿನಿಂದಲೆ ಹೇಳಿ, ಅದನ್ನು ಹುಡುಕಿ ಪ್ರಕಟಿಸುವಂತೆ ಹೇಳಿದ್ದರು.*
*'ನೆನಪಿನ ದೋಣಿಯಲ್ಲಿ' ಬರೆಯುತ್ತಿರುವಾಗ ಹಳೆಯ ಹಸ್ತಪ್ರತಿಗಳಲ್ಲಿ ಅದು ಸಿಕ್ಕಿದ್ದು ಈಗ ಪ್ರಕಟವಾಗುತ್ತಿದೆ. ಈ ದೃಶ್ಯದ ಬಹುಭಾಗ ಭಾವ ಮತ್ತು ಭಾಷೆಗಳೆರಡರಲ್ಲಿಯೂ ಕುಮಾರವ್ಯಾಸ ಮಹಾಕವಿಗೆ ಋಣಿಯಾಗಿರುವುದನ್ನು ಯಾರಾದರೂ ಗುರುತಿಸಬಹುದಾಗಿದೆ.*

*(ಬೈಗಿನ ಹೊತ್ತು. ಗಂಗೆಯ ದಡದ ಬಳಿಯ ಬನದಲ್ಲಿ ಶ್ರೀಕೃಷ್ಣನೂ ಕರ್ಣನೂ ತಿರುಗಾಡುತ್ತಾ ಬರುವರು.)*

**ಶ್ರೀಕೃಷ್ಣ** – *(ಬಾಂದಳದ ಕಡೆ ತುಸುಹೊತ್ತು ದಿಟ್ಟಿಸಿ ಪಡುವಲ ದೆಸೆಯನ್ನು ನೋಡಿ)*
ಕರ್ಣ, ಸಂಜೆಯ ಚೆಲುವೆನಿತು ಮೋಹಿಪುದು ಮನವ!
ನೋಡು, ಬೈಗಿನ ನೇಸರಸ್ತಗಿರಿಯಂಚಿನಲಿ
ಹೇಮಧೂಮವ ಹರಡಿ ತೊಳಗುತಿಹನೆಂತು!
ಬನದ ಚೆಂದಳಿರೆಲ್ಲ ಬೈಗುಗೆಂಪೊಳು ಮುಳುಗಿ
ನಗುತಲಿದೆ, ನಲಿಯುತಿದೆ; ತಲೆದೂಗಿ ಆಡುತಿದೆ!
ನೊರೆಯ ಮಗುಡವನಾಂತ ಗಂಗೆಯ ತರಂಗಗಳು
ಎಳೆಮಕ್ಕಳಂದದಲಿ ಸಂತಸವು ಮಿಗಿಲಾಗೆ
ತೊದಳಾಡಿ ಕುಣಿಯುತಿಹವೆಂತು! ನೋಡಲ್ಲಿ,
ಮಳಲರಾಶೀಯೊಳಿರುವ ಬಿಂಗಗಳು, ನೇಸರಿನ
ಬೆಳಕ ಬರುಬಿಂಬಿಸುತ ಮಿರುಗುತಿಹವೆಂತು!
ಸಗ್ಗದ ಸೊಬಗು ತಿರೆಗೆ ಇಳಿದಂತೆ ತೋರುವುದು!

**ಕರ್ಣ** – ಹೌದು, ಕಮಲಾಕ್ಷ, ಕರ್ತನಂತೆಯೆ ಸೃಷ್ಟಿ!
ಕವಿಯಂತೆಯೇ ಕವಿತೆ! ಮನದಂತೆಯೇ ದೃಷ್ಟಿ!

**ಶ್ರೀಕೃಷ್ಣ** – ಬಾ, ಮಿತ್ರ, ಈ ಶಿಲೆಯ ಕಾಲ್ಮಣೆಯ ಮೇಲ್ಕುಳಿತು
ಸಂಧಾನ ಕಾರ್ಯದಲಿ ಬಂದಂತ ಬಳಲಿಕೆಯ
ಪರಿಹರಿಸಿ ಕೊಳ್ಳೋಣ! ನಿನಗಾಗಿ ನನ್ನೆದೆಯು

ದುಃಖದಲಿ ಮುಳುಗಿ ತೇಲಾಡುತಿದೆ. ಅದರಿಂದ
ನಿನ್ನೊಡನೆ ಕೆಲವು ಮಾತುಗಳಾಡಬೇಕೆಂದು
ನಿರ್ಣಯಿಸಿ, ಉಳಿದೆಲ್ಲರನು ಕಳುಹಿ, ನಿನ್ನನ್ನು
ಕರೆತಂದೆ. ನೀನರಿಯದಿರುವ ಗುಟ್ಟೊಂದಿಹುದು,
ಅದನು ನಿನಗಿಂದರುಹುವೆನು,
ಕೇಳು! *(ಶ್ರೀಕೃಷ್ಣನು ಕಲ್ಲಿನ ಕಾಲ್ಮಣೆಯ ಮೇಲೆ ಕುಳಿತು ಕೊಳ್ಳುವನು, ಕರ್ಣನು ದೂರ ನಿಲ್ಲುವನು.)*
ಬಾ, ಕರ್ಣ; ಕುಳಿತೊಕೋ, ದೂರ ನಿಲ್ಲುವೆ ಏಕೆ?

**ಕರ್ಣ** – ದೇವ, ನಿಮ್ಮೊಡನೆ ಕುಳಿತುಕೊಳ್ಳುವುದೆನಗೆ
ತರವಲ್ಲ ಸೂತಪುತ್ರನು ನಾನು. ನಿಮಗೆ ನಾ
ಎಣೆಯಲ್ಲ : ನೀವು ಯದುಕುಲ ಸಾರ್ವಭೌಮರು!
ನನಗೀ ತೃಣಾಸನವೆ
ಸಾಕು! *(ಕರ್ಣನು ಹುಲ್ಲಿನ ಮೇಲೆ ಕುಳಿತು ಕೊಳ್ಳಲೆಳಸುವನು. ಶ್ರೀಕೃಷ್ಣನು ಮೇಲೆದ್ದು ಅವನ ಕೈಹಿಡಿದು)*

**ಶ್ರೀಕೃಷ್ಣ** – ಏನಿದೇನಿದು, ಕರ್ಣ?
ಏನಿದೇನಿದು, ದಿವಾಕರತನಯ, ಕೌಂತೇಯ,
ಶಶಿವಂಶ ಮೌಳಿ, ಧರ್ಮಜಾಗ್ರಜ, ವೀರ
ಪಾರ್ಥಿವನೆ? ನೀನು ರಾಮಂಗೆಣೆಯು! ಅಂಗಪತಿ,
ನೀನೆನಗೆ ಪೂಜ್ಯನಾಗಿರುವೆ. ನನ್ನೀಯನು
ನೀನರಿಯೆ. ಬಾ, ಕುಳಿತುಕೋ! *(ಕರ್ಣನನ್ನು ಶೀಲಾಸನದ ಮೇಲೆ ಕೂರಿಸಿ, ತಾನೂ ಕುಳಿತುಕೊಳ್ಳುವನು.)*

**ಕರ್ಣ** – *(ಆಲೋಚನಾ ಮಗ್ನನಾಗಿ)* ದೇವ, ಮುರಹರ,
ದಾನವಾಂತಕ, ಬೆಸಸು; ವಂಶವಿಹೀನನನು
ನಿಮ್ಮಡಿಗಳೊಡನೆ ಸಮಾನಿಸುವರೇ? ಸಾಕು,
ಪರಿಹಾಸ್ಯದಲಿ ನುಡಿವುದೇಕೆ?

**ಶ್ರೀಕೃಷ್ಣ** – ಹೇ ಕರ್ಣ,
ಮಾನನಿಧಿ, ನನ್ನಾಣೆ, ನನ್ನಿಯನೆ ನುಡಿಯುತಿಹೆ!
ಪರಿಹಾಸ್ಯಕಿದು ಸಮಯವಲ್ಲ. ಹರಿಯೊಂದು
ಕುರಿಯೊಡನೆ ಸೇರಿ, ತಾ ಕುರಿಯೆಂದು ತಿಳಿವಂತೆ,
ನೀನರಿಯೆ ನಿನ್ನತುಳ ವಂಶವನು. ರವಿಸುತನೆ,
ನೀನು ನಮ್ಮೆಲ್ಲರ ಹವಣೆ? ನೇಸರಿನ ಬಳಿ ನಿನದು;
ರಾಮನಿಗೆ ನೀನೆಣೆಯು!

**ಕರ್ಣ** – ಭಗವಂತ, ನೀ ನುಡಿವ
ಮಾತುಗಳ ಬಗೆಯರಿಯೆ. ಬರಿದೆ ಕಾದುವುದೇಕೆ?
ಮಾಯಾವಿ, ನಿನಗೆ ನಾನಂಜುವೆನು.

**ಶ್ರೀಕೃಷ್ಣ** – ಕಲಿಕರ್ಣ,
ಈ ಧರೆಯೊಳೀಗ ನಿನಗೆಣೆಯಾರು? ಸತ್ಯವನು
ತಿಳಿದವರು ನಾವೈದು ಮಂದಿ : ನಾ ಬಲ್ಲೆ,
ಕುಂತಿ ಬಲ್ಲಳು, ಮತ್ತೆ ದುರ್ಯೋಧನನು ಬಲ್ಲ;
ನಿನ್ನ ತಂದೆ ಸೂರ್ಯನರಿತಿಹನು; ಸರ್ವವನು
ತಿಳಿದಿರುವ ನಿನ್ನನುಜ ಸಹದೇವನಿಗೆ ಗೊತ್ತು.
ಮತ್ತಾರು ತಿಳಿದಿಲ್ಲ. ಕುಂತಿದೇವಿಯು ಪಡೆದ
ಐದು ಮಂತ್ರಂಗಳಲಿ ಜನಿಸಿದವರೊಳು ನೀನೆ
ಮೊದಲಿಗನು. ಸೂರ್ಯದೇವನೆ ನಿನ್ನ ತಂದೆ.
ನಿನ್ನ ಬಳಿ ಧರ್ಮಜನು ಹುಟ್ಟಿದನು; ಅವನ ಬಳಿ
ಕಲಿಭೀಮ; ಅವನ ಬಳಿ ಕಲಿಪಾರ್ಥನುದಿಸಿದನು.
ನಕುಲ ಸಹದೇವರೈದನೆ ಮಂತ್ರದಲಿ, ಮಾದ್ರಿ
ಬಸಿರಿನಲಿ ಜನಿಸಿದರು.

**ಕರ್ಣ** – *(ಆಶ್ಚರ್ಯದಿಂದಲೂ, ಕುತೂಹಲದಿಂದಲೂ)*
ಕೌತುಕದ ಸುದ್ದಿಯಿದು,
ಮುರವೈರಿ. ಕುಂತಿದೇವಿಯ ಬಸಿರಿನಲಿ ಬಂದ
ನಾನು ಸೂತಜನಾದುದೆಂತು? ಕೌರವನ ಗೆಳೆತನವ
ತಪ್ಪಿಸಲು ಭೇದದಲಿ, ನಿನ್ನ ಕಲ್ಪನೆ ಕಡೆದ
ಕತೆಯಂತೆ ತೊರುವುದು!

**ಶ್ರೀಕೃಷ್ಣ** – ಹಾಗಲ್ಲ, ರವಿತನಯ;
ನಿನ್ನಭ್ಯುದಯಕೆಳಸಿ ನನ್ನಿಯನು ಹೇಳಿದೆನು.
ಕನ್ನೆತನದಲ್ಲಿ ಕುಂತಿ ದೂರ್ವಾಸ ಮುನಿವರನ
ಮಂತ್ರ ಬಲವನು ಪರೀಕ್ಷಿಸಲೆಂದು, ಹರಿಯುತಿಹ
ಈ ದಿವಿಜನದಿಗೈತಂದು ಮಂತ್ರವನು ಉಚ್ಚರಿಸೆ,
ಹುಡುಗಾಟವೆಂದರಿಯದಲೆ ಸೂರ್ಯದೇವನು ಬಂದು
'ಲಲನೆಯಾಸೆಯು ಸಲ್ಗೆ' ಎಂದು ಮರೆಯಾದನು!
ಲೋಕಾಪವಾದಕ್ಕೆ ಬೆದರಿ ಲಲನೆ ನಿನ್ನಂ

ಕೈಯ್ಯೆಡೆಯಾಗಿತ್ತಳೀ ಗಂಗೆಯಂಕದಲಿ!
ಅಲ್ಲಿಂದ ಸೂತನೊಯ್ದನು ನಿನ್ನ ರಾಧೆಯೆಡೆಗೆ,
ಅದರಿಂದ ರಾಧೇಯನಾಗಿರುವೆ! ನನ್ನಿಯಿದು;
ನನ್ನಾಣೆ, ಸೂರ್ಯದೇವನ ಆಣೆ, ಗಂಗೆಯಾಣೆ!

**ಅಶರೀರವಾಣಿ** – ಹೇ ಕರ್ಣ, ಕೌಂತೇಯ, ರವಿತನಯ, ಅಂಗಪತಿ,
ವಾಸುದೇವನ ನುಡಿಯು ಸತ್ಯ! ಸತ್ಯ! ಸತ್ಯ!
*(ಕರ್ಣನು ಶಿಲಾಸನದಿಂದ ತಟ್ಟಕ್ಕನೆ ಎದ್ದು ದೂರಹೋಗಿ, ಮೊಗದಿರುಹಿ, ಚಿಂತಿಸುತ್ತ. ಕಂಬನಿಯ ಕರೆಯುತ್ತ ಹರಿಯುವ ಗಂಗೆಯನ್ನ ನೋಡುತ್ತ)*

**ಕರ್ಣ** – *(ಸ್ವಗತ)* ಅಯ್ಯೋ, ಕುರುಪತಿಯೆ, ಕೇಡಾದುದೇ ನಿನಗೆ?
ನಿಜವನೆನಗರುಹಿ ಕೈಮುರಿದೆನ್ನ ಕೊಂದನೀ
ಕಮಲಾಕ್ಷ. ಜಗವೆಲ್ಲ ಸೂತಪುತ್ರನು ಎಂದು
ಧಿಕ್ಕರಿಸಿ ನೂಂಕುತಿರೆ, ಅಂಗರಾಜ್ಯವನಿತ್ತು
ನೀನೆನ್ನ ಕ್ಷತ್ರಿಯನ ಮಾಡಿರುವೆ. ನನ್ನನೇ
ನೆಚ್ಚಿರುವೆ; ನಿನ್ನ ಜೀವದ ಜೀವ ನಾನೆಂದು
ಬಗೆದಿರುವೆ. ಒಡಲೆರಡು ಆಸುವೊಂದು ಎಂಬಂತೆ
ನೀನೆನ್ನ ಪೊರೆದಿರುವೆ. ವಜ್ರಕವಚವ ಮೀರ್ದ
ಅಂಗರಕ್ಷೆಯು ಇಂದು ಹುಡಿಯಾಯ್ತೆ? ಮುರವೈರಿ
ಫಲುಗುಣರ ಸಾವಳಿದು ಹೋಯ್ತೆ? ಕೇಡಾಯ್ತೆ
ನನ್ನ ನೆಚ್ಚಿದ ನಿನಗೆ? ಕೌರವೇಂದ್ರನೆ, ನಿನ್ನ
ಮಕುಟಮಣಿ ಸಡಿಲಿದುದೆ? ಭಾರತವು ನಮ್ಮವರ
ಭಾಗಕ್ಕೆ ಬಯಲಾಯ್ತೆ? ಹಾ ಕೃಷ್ಣ, ದನುಜಹರ,
ನಿನ್ನ ಚಕ್ರದ ಮಾನವಿಂದುಳಿಸಿಕೊಂಡೆಯಾ?
ಕ್ರೂರಸತ್ಯವನರುಹಿ ಕೊಲೆಗಾರನಾದೆಯಾ?

**ಶ್ರೀಕೃಷ್ಣ** – *(ಮುಗುಳ್ನಗೆಯಿಂದ)*
ಕೌಂತೇಯ, ಏನ ಚಿಂತಿಸುವೆ? ಬಾ ಕುಳಿತುಕೋ.
ರವಿವಂಶದವನೆಂದು, ಶಶಿವಂಶದವನೆಂದು,
ಪಾಂಡುನಂದನನೆಂದು, ಕುಂತಿಯ ತನುಜನೆಂದು,
ಮೇದಿನಿಗೆ ದಿಟದರಸ ನೀನೆಂದು ತಿಳಿಸಿದೆನು;
ಕೊರತೆಯೇನದರಲ್ಲಿ? ಮೇದಿನಿಗೆ ನೀನೊಡೆಯ;
ಧರ್ಮರಾಯನು ಅಲ್ಲ; ಕುರುರಾಯನೂ ಅಲ್ಲ.

ಇದುವರೆಗೆ ಕೌರವನ ಬಾಯ್ದಂಬುಲಕ್ಕೆ
ನೀನು ಕಿಂಕರನಂತೆ ಕೈಯೊಡ್ಡಿದುದೆ ಸಾಕು!
ಇನ್ನು ಪಾಂಡವರೊಡನೆ ಸೇರಿ ಸಾಮ್ರಾಜ್ಯವಾಳು;
ನಿನ್ನ ತಾಯಿಯ ಹಡೆದ ಹೊಟ್ಟೆಯ ಯಾತನೆಯ
ಪರಿಹರಿಸು. ನನ್ನೊಡನೆ ಬಾ; ನಿನಗೆ ಮಣಿಯವರು
ಪಾಂಡವರು. ಧರ್ಮಜನು ನಮಿಸುವನು; ಫಲಗುಣನು
ನಿನ್ನಾಜ್ಞೆಯಂತಿಹನು! ಭಕ್ತಿಯಲಿ ಕಲಿಭೀಮ
ಎರಗುವನು ಪದತಳಕೆ! ಮೇಲೆ ಚಿಂತೆಯದೇಕೆ?
ನಿನಗೆ ಹಸ್ತಿನಪುರದ ಪಟ್ಟವನು ಕಟ್ಟುವೆನು;
ಗದ್ದುಗೆಯೊಳಿರೆ ನೀನು, ಪಾಂಡವರು ಕೌರವರು
ನಿನ್ನನೋಲೈಸುವರು. ಕಾಣಿಕೆಯನೊಪ್ಪಿಪರು
ಮಾದ್ರ ಮಾಗದ ಯಾದವಾದಿಗಳು ನಿನಗೆ!
ಹೆಚ್ಚೇನು? ನಾನೆ ಕಿಂಕರನಾಗಿ ನಡೆಯುವೆನು!

**ಕರ್ಣ** – *(ನಸು ಸಿಟ್ಟಿನಿಂದ ಮತ್ತ ಶೋಕದಿಂದ)*
ಎಲೆ ಮುರಾಂತಕ, ಸಾಕು! ಕೊರಳ ಕೊಯ್ಯುವ ನುಡಿಗೆ
ಪೂರ್ಣವಿರಾಮವ ಹಾಕು! ಹಿಂದೆ ಗೋಕುಲದಲ್ಲಿ
ಕೊಳಲಿನಿನಿದನಿಯಿಂದ ಹುಡುಗಿಯರ ಮೋಹಿಸಿದ
ವಿದ್ಯೆಯನು ಮೆರೆಯದಿರು ನನ್ನಲ್ಲಿ. ಕೇಡನ್ನು
ಬಗೆಯದಿರು ಕುರಪತಿಗೆ; ನೆಲದ ನೆಪದಿಂದೆನ್ನ
ಮರಳು ಮಾಡುವೆನೆಂದು ತಿಳಿಯದಿರು. ಧರ್ಮದಲಿ
ನೆಲೆಮನೆಯ ಕಟ್ಟಿರುವ ಕಡುಗಲಿಯು ಎಂದಿಗೂ
ದ್ರೋಹಿಯಾಗನು ತನ್ನ ಸಾಕಿ ಸಲುಹಿದ ಪತಿಗೆ!

**ಶ್ರೀಕೃಷ್ಣ** – ಹೇ ಕರ್ಣ, ದುಡುಕಿ ನುಡಿಯದೆ ವಿಚಾರವ ಮಾಡು.
ನಾನು ನಿನ್ನಪದೆಸೆಯ ಬಯಸುವವನಲ್ಲ.
ಸೂರ್ಯನಿಗೆ ಮಗನಾಗಿ, ಪಾಂಡವಾಗ್ರಜನಾಗಿ,
ಕೌಂತೇಯನಾಗಿ, ಶಶಿಕುಲ ಲಲಾಮನೆ ಆಗಿ,
ಕಲಿಯಾಗಿ, ಅಸಮಬಲವಾಗಿ ಕೌರವನ
ಸಭೆಯಲ್ಲಿ ಜೀಯ ಎಂದು ನೀನಿರುವುದತಿಕಷ್ಟ!
ನೀನು ನನ್ನೊಡನೆ ಬಾ; ಪಾಂಡವರ ಒಡಗೂಡು;
ಮೇಲೆ ನಿನಗೆಣೆಯಾರು? ಕಡಲು ಬಳಸಿದ ತಿರೆಗೆ
ಚಕ್ರೇಶನಾಗುವಾ ಸೌಭಾಗ್ಯ ನಿನಗಹುದು!

ನಿನ್ನೆಡದ ಮೈಯಲ್ಲಿ ಕೌರವರು, ಬಲದಲ್ಲಿ
ಪಾಂಡುನಂದನರು ನಿನ್ನನುಮತಿಯ ನಡೆಸುತ್ತ
ಸೇವೆಯನು ಮಾಡುವರು. ನೀನರಸನಾದರೆ
ವೈರವಿತ್ತಂಡಕ್ಕೆ ಬಳಿಕಿಲ್ಲ. ಕಾಳೆಗದ
ಕೊಲೆ ನಿಂತು, ರಾಜ್ಯದಲ್ಲಿ ಶಾಂತಿ ನೆಲೆಸುವುದು.
ಇಂದು ಈ ಎಡೆಯಲ್ಲಿ, ಈ ಗಂಗೆಯೆಡೆಯಲ್ಲಿ,
ನಿನ್ನ ಕೈಯಲಿ ಮಹಾಭಾರತದ ಕೀಲಿಹುದು.
ನೆತ್ತರಿನ ಹೊಳೆ ಹರಿಯುವಂತೆ ಮಾಡುವುದು,
ಅದನು ತಡೆಯುವುದೆಲ್ಲ, ನಿನ್ನ ಕೈಯಲ್ಲಿಹುದು!
ಸಲೆ ವಿಚಾರಿಸಿ ನೋಡು!

**ಕರ್ಣ** – *(ಸ್ವಗತ)* ಪೊರೆದೆನ್ನ ಮಿತ್ರನನು
ಕೈಬಿಡುವುದನುಚಿತವು. ಕನಸಿನಲ್ಲಿಯು ನಾನು
ಅದನೆಣಿಸಲಾರೆ. ಕೊಲುವೆನೆಂದರೆ ಪಾಂಡು
ನಂದನರು ಒಡನೆಹುಟ್ಟಿದರೆಂಬ ಸತ್ಯವನು
ನಾನರಿತೆ. ಕೊಲ್ಲದಿರೆ ಕೌರವಗೆ ಗತಿಯಿಲ್ಲ.
ಭೇದದಲಿ ಹೊಕ್ಕಿರಿದನೇ ಹರಿಯು?
*(ಬಹಿರಂಗವಾಗಿ)* ಮುರವೈರಿ,
ನನ್ನ ಜನನವನರುಹಿ ಕಂಗಳನು ಕಿತ್ತಿರುವೆ.
ಕೌರವೇಂದ್ರನ ಕೊಂದೆ! ಕೊಂದೆ! ಕೊಂದೆ!
ಹೊರೆದ ದಾತಾರಂಗೆ ಶತ್ರುಗಳ ತಲೆಗಳನು
ತರಿದೊಪ್ಪಿಸುವ ಭರದೊಳಿರ್ದೆನು. ನೀನೆನ್ನ
ಕೈಮುರಿದು ಕೌರವೇಂದ್ರನ ಕೊಂದೆ! ಮಾತಿನಲಿ
ಜಯಸಿರಿಯನೆಳೆದಿರುವೆ ನಿನ್ನೆಡೆಗೆ! ಅರಸುತನ
ಬೇಕಿಲ್ಲ. ಸಿರಿಗೆ ಸೋಲುವನಲ್ಲ. ಪಾಂಡವರ,
ಕೌರವರ ಬೆಸಕೆಯ್ಸಿಕೊಳ್ಳುವುದು ಬೇಡೆನೆಗೆ!
ಕೌರವೇಂದ್ರನನುಳಿದು ಇನ್ನಾಪ್ತರೆನಗಿಲ್ಲ.
ಕುರುಪತಿಯ ಕಿಂಕರನು ನಾನಲ್ಲ, ಹೇ ಕೃಷ್ಣ ,
ಗೆಳೆಯನಹೆ! ಕುರುಪತಿಗೆ ಕರ್ಣನೆಂದರೆ ಜೀವ
ಉಬ್ಬುವುದು. ನಾನೆ ನೆಲಕೊಡೆಯನೆಂದರಿತಿಹನು.
ನೋಡಿ ದಣಿಯನು ನನ್ನ; ನಿಚ್ಚವುಚಿತವ ಮಾಡಿ
ದಣಿಯನು. ಬಿರುದ ಹೊಗಳಿಸಿ ಹಾಡಿ ದಣಿಯನು.

ಕೌರವೇಂದ್ರನನೆಂತು ಮರೆಯುವೆನು? ಕಷ್ಟದಲಿ
ಮಾನನಿಧಿಯನ್ನೆಂತು ತೊರೆಯುವೆನು?

**ಶ್ರೀಕೃಷ್ಣ** – *(ಎದ್ದುನಿಂತು ಅತ್ತ ಇತ್ತ ತಿರುಗಾಡುತ್ತಾ ದರ್ಪವಾಣಿಯಿಂದ)*
ಕಾಳೆಗವ
ನೆನೆ, ಕರ್ಣ, ಕೌರವ ವಿನಾಶವನು ನೆನೆ, ಕರ್ಣ.
ಪಾರ್ಥನೆಚ್ಚಂಗುಗಳ ಸರಿಯಲ್ಲಿ, ಕೆರಳಿದಾ
ಕಲಿಭೀಮನುರುಗದಾಘಾತದಲಿ, ನೆಲಕುರುಳಿ
ಪುಡಿಯೊಡನೆ ಸೇರುವಾ ಕುರುದಳವ ನೆನೆ, ಕರ್ಣ.
ಕೌರವನ ದುರ್ಗತಿಯ ನೆನೆ, ಕರ್ಣ, ಕಡೆಯಲ್ಲಿ,
ನಿನ್ನಳಿವ ನೆನೆ, ಕರ್ಣ.

**ಕರ್ಣ** – *(ತಿರಸ್ಕರಿಸುವಂತೆ ನಗುತ್ತಾ, ಎದ್ದುನಿಂತು)*
ಮಧುಸೂದನಾ, ಏನು
ಹುಡುಗರನು ಹೆದರಿಸುವ ತಾಯಿಯೊಲು ನುಡಿಯುತಿಹೆ!
ಸಮರದಲಿ ನನಗಂಜಿಕೆಯೆ? ಭೀಮನುರುಗದಾ
ಘಾತಕ್ಕೆ ಅಳುಕುವನೆ? ಫಲುಗುಣನ ಸರಳುಗಳ
ಸುರಿಮಳೆಗೆ ಬೆದರೆ ನಾನೇನು ತರಗೆಲೆಯೆ?
ಸಾವಿಗಂಜಲು ನಾನು ಹೇಡಿಯೇ! ಹೇ ಕೃಷ್ಣ,
ಮುಳಿದು ನಿಂತರೆ ನಾನು ನಿನ್ನ ಕಲಿಪಾರ್ಥನೆಲ್ಲಿ
ನಿನ್ನ ಭಿಮನು ಎಲ್ಲಿ? ಚಕ್ರಧರ, ನೀನೆಲ್ಲಿ?
*(ಎರಡು ಹೆಜ್ಜೆ ತಿರುಗಾಡಿ ಸ್ವಲ್ಪ ಶೋಕಧ್ವನಿಯಲ್ಲಿ)*
ಒಡನೆ ಹುಟ್ಟಿದರೆಂದು ನನ್ನಿಯನು ಹೇಳಿ
ಪಾಂಡುಸುತರನು ಕಾದೆ! ನನ್ನೊಡೆಯನನು ಕೊಂದೆ!
ಪಾಂಡುನಂದನರೊಡನೆ ನಾ ಸೇರಲಾರೆ!
ಸಲಹಿದ ಕೃತಜ್ಞತೆಗೆ, ಕುರುಪತಿಯ ಸಲುವಾಗಿ,
ರಣಭೂಮಿಯಲ್ಲೆನ್ನ ಕಾಯವನು ಬಲಿದಾನ
ಮಾಡುವೆನು. ನಿನ್ನ ನೆಚ್ಚಿನ ಧೀರರೈವರನು
ಸಾಯಿಸೆನು, ರಾಜೀವಸಖನಾಣೆ! *(ರವಿಯನ್ನು ದಿಟ್ಟಿಸುತ್ತಾನೆ.)*

**ಶ್ರೀಕೃಷ್ಣ** – ಮಹಾದಾನಿ,
ಹೇ ದಯಾಸಾಗರನೆ, ಭೇದದಲಿ ನಾನಿರಿದೆ
ಎಂದೇಕೆ ಚಿಂತಿಸುವೆ? ನಿಜವನೊರೆಯದಿರೆ

ನನಗೆ ಗುಣವಲ್ಲೆಂಬ ಕತದಿಂದ ಹೇಳಿದೆನು?
ತಪ್ಪೇನು? – ನಮ್ಮೆಡೆಗೆ ನೀ ಬಂದರೊಳ್ಳೆಯದು;
ಬಾರದಿದ್ದರೆ, ಕರ್ಣ, ಮಂದಮತಿ ಕೌರವಗೆ
ಮಧುರವಚನದೆ ಬುದ್ಧಿಯನು ತಿಳುಹಿ, ರಾಜ್ಯವನು
ತಮ್ಮಂದಿರಿಗೆ ಕೊಡಿಸು. ಹಿತದ ಹಾದಿಯಿದು.
ನಿನ್ನ ಗೆಳೆಯನು ಕೌರವೇಶ್ವರನು; ನೀನೆಂದ
ಮಾತುಗಳ ಹಿಂದುಗಳೆಯನು ಅವನು. ನೀನೆಳಸೆ
ಸಂಧಿ ಸುಲಭವು; ಕಾರ್ಯಸಾಧನೆಯಾಗುವುದು.

**ಕರ್ಣ** – ಕಾಲ ಮಿಂಚಿತು, ಕೃಷ್ಣ. ಸಂಧಿಯ ಮಾತೇಕೆ?
ಮಸೆದುದಿತ್ತಂಡಕ್ಕೆ ಮಚ್ಚರವು. ಕೋಪಾಗ್ನಿ
ಹೊಗೆಯುತಿದೆ. ಕೇಸುರಿಗಳೇಳದೆಯೆ ಮಾಣದು.
ಅಲ್ಲದೆಯೆ ನಾನೀಗ ಕುರುಪತಿಗೆ ಮಂತ್ರವನು
ಬೆಸಸಿದೊಡೆ ಸಂದೇಹಕಾಸ್ಪದವು. ಕೆಚ್ಚೆದೆಯ
ಕಟ್ಟಾಳು ಸಂಧಿಕಾರ್ಯಕೆ ತೊಡಗೆ, ಬೀರಕೇ
ಕುಂದುಕವು. ಕಾಳೆಗಕೆ ಬೆದರಿದನು ಕಲಿಕರ್ಣ
ಎಂದೆಲ್ಲ ಪರಿಹಾಸ್ಯ ಮಾಡುವರು, ತರವಲ್ಲ.
ಹೋಗಿಬರುವೆನು, ಕೃಷ್ಣ, ಪಡುವೆಟ್ಟದಂಚಿನಲಿ
ಮುಳುಗಿದನು ದಿನಮಣಿಯು. ಸಂಧಿಯಳಿದಿಹ ದಿನವು;
ನಾನಿಲ್ಲಿ ತಳುವಿದೊಡೆ ಸಂಶಯವು ಮೂಡುವುದು
ನಮ್ಮವರ ಮನದಲ್ಲಿ. ಹುತ್ತದೆಡೆ ರಜ್ಜುವಿರೆ
ಕತ್ತಲಲಿ ಹಾವಹುದು. ಕಳುಹಬೇಹುದು ಎನ್ನ.
*(ಕರ್ಣನು ನಮಸ್ಕಾರ ಮಾಡುವನು, ಕೃಷ್ಣನು ಹರಸುವನು. ಕರ್ಣನು ತೆರಳುವನು.)*

**ಶ್ರೀಕೃಷ್ಣ** – ಎಲೆ ದಿವಾಕರತನಯ, ಕೌಂತೇಯ, ಧನ್ಯಾತ್ಮ,
ಈ ಜಗದೊಳಿಂದು ನಿನ್ನನ್ನರತಿವಿರಳ!
ಕೌರವರ ಹಿಂಡಿನಲಿ, ಪಾಂಡವರ ಗುಂಪಿನಲಿ,
ಯಾದವರ ಬಳಗದಲಿ, ಮೇಣುಳಿದ ಅರಸರಲಿ,
ನಿನ್ನ ಹೋಲುವರೊಬ್ಬರೂ ಇಲ್ಲ! ಭಾರತದ
ಸಂಗ್ರಾಮರಂಗದಲಿ ನಿನ್ನ ನೆತ್ರಹೊಳೆಯೆ
ದಿವಿಜನದಿಯಾಗುವುದು. ಪಾಪಗಳು ಕೊಚ್ಚುವುದು!
ನನ್ನಿಯಲಿ, ಚಾಗದಲಿ, ಬೀರದಲಿ, ಭಕ್ತಿಯಲಿ,
ಕರುಣೆಯಲಿ, ನೇಹದಲಿ ಮೊತ್ತಮೊದಿಲಗ ನೀನು,

ತುತ್ತತುದಿಯೂ ನೀನೆ! ನಿನ್ನ ಜನನವ ನಿನು
ತಿಳಿಯದಿರೆ, ನಾಬಲ್ಲೆ, ಪಾಂಡವರಿಗಿನ್ನೊಮ್ಮೆ
ಮುಂದೆ ಎಂದೆಂದಿಗೂ ವನವಾಸವೇ ತುದಿಯ
ಗತಿಯಾಗುತಿತ್ತು. ನಿನ್ನ ಕತೆಯನು ಕೇಳಿ
ಕಂಬನಿಯ ಕರೆಯುವರು : ಅತ್ಯಂತ ದುಃಕತಮ,
ಅತ್ಯಂತ ಧನ್ಯತಮವಾಗಿಹುದು ನಿನ್ನೀ
ಜೀವಮಾನದ ಯಾತ್ರೆ! ಅಸಮನ್ಯೆ ನೀನು!
ನನ್ನಲೀಲೆಗೆ ನೀನೆ ಮೂಲೆಗಲ್ಲಾಗಿರುವೆ.
ನನ್ನ ಲೀಲೆಯ ಮೈಮೆ ನಿನ್ನಿಂದ ಹೆಚ್ಚಿಹುದು.
ಕರ್ಣನಿಗೆ ಶತ್ರುವಾಗಲಿ ಮಿತ್ರನಾಗಿರಲಿ
ಹೆಮ್ಮೆಗದು ಕಾರಣವು! ನಿನಗಿದೋ ಮಣಿಯುವೆನು!

*(ಪರದೆ ಬೀಳುವುದು)*